ಉಪನ್ಯಾಸ
ಗ್ರಂಥಮಾಲೆ

೧೨೬

ಡಾ|| ಖೊರಾನಾ ಅವರ ಸಂಶೋಧನೆಗಳು

ಎಚ್. ಕೆ. ಮಲ್ಲಿಕಾರ್ಜುನಪ್ಪ,
ಎಂ. ಎಸ್‌ಸಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಆಗಸ್ಟ್, ೧೯೭೧

ಉಪನ್ಯಾಸ ಗ್ರಂಥಮಾಲೆ

೩೦೨

ಹಾವುಗಳು ಮಾನವನ ಮಿತ್ರ-ಶತ್ರು

ಎನ್. ಟಿ. ಮೋಟೆಬೆನ್ನೂರ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಅಕ್ಟೋಬರ, ೧೯೭೯

ಪ್ರಕಾಶಕರು :

ಸಿ. ಎಸ್. ಕಣವಿ
ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಅಕ್ಟೋಬರ, ೧೯೭೯

ಬೆಲೆ : ೫೦ ಪೈಸೆ

ಮುದ್ರಕರು :

ಜಿ. ಬಿ. ಮನ್ವಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦ ೦೦೩.

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂಆಗಿರುವುದುಹೆಮ್ಮೆಯ ಮಾತಾಗಿದೆ.ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೦೧ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧–೧೦–೧೯೭೪

ಎಸ್. ಎಸ್. ಒಡೆಯರ
ಕುಲಪತಿಗಳು

ಪರಿವಿಡಿ

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ೨೬೦ನೆ ಉಪನ್ಯಾಸ ಶಿಬಿರವು ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಕನ್ನಡ ಹಿತರಕ್ಷಕ ಸಂಘದ ಆಶ್ರಯದಲ್ಲಿ ೧೯೭೮ ರ ಸಪ್ಟಂಬರ ೧೮ ಹಾಗೂ ೧೯ ರಂದು ಜ್ಯೂನಿಯರ ಕಾಲೇಜಿನ ಸಭಾಂಗಣದಲ್ಲಿ ನೆರವೇರಿತು.

ದಿನಾಂಕ ೧೮–೯–೧೯೭೮ ನೆಯ ಸೋಮವಾರದಂದು ನಾನು " ಹಾವುಗಳು ಮಾನವನ ಮಿತ್ರ–ಶತ್ರು" ಎಂಬ ವಿಷಯದ ಮೇಲೆ ಮಾತನಾಡಿದೆನು. ಆ ದಿನದ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್.ಎಂ. ರುದ್ರಯ್ಯನವರು ವಹಿಸಿದ್ದರು. ಕಂಪ್ಲಿಯ ಅನೇಕ ವ್ಯಕ್ತಿಗಳು, ಶಾಲಾ, ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮತ್ತು ಸುತ್ತಲಿನ ಗ್ರಾಮವಾಸಿಗಳು ಅಧಿಕ ಸಂಖ್ಯೆಯಲ್ಲಿ ಬಂದು ನನ್ನ ಉಪನ್ಯಾಸವನ್ನು ಶಾಂತರೀತಿಯಿಂದ ಕೇಳಿ, ಚರ್ಚೆಯಲ್ಲಿ ಅಮಿತಾನಂದದಿಂದ ಭಾಗವಹಿಸಿದರು. ತಮ್ಮಲ್ಲಿದ್ದ ಹಾವಿನ ಬಗೆಗಿನ ವಿಚಾರಗಳನ್ನು ಸ್ವಲ್ಪವೂ ಸಂಕೋಚವಿಲ್ಲದೆ ಹೇಳಿ ನನ್ನಿಂದ ಸಾಕಷ್ಟು ಸಂಶಯಗಳನ್ನು ನಿವಾರಿಸಿಕೊಂಡರು. ಉಪನ್ಯಾಸದ ಯಶಸ್ಸಿಗೆ ಕಂಪ್ಲಿಯ ಕನ್ನಡ ಹಿತರಕ್ಷಕ ಸಂಘದ ಐವತ್ತೂ ಸದಸ್ಯರು ಕಾರಣ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಉಪನ್ಯಾಸಕ್ಕೆ ಮೂಲಸ್ವರೂಪಕೊಟ್ಟು, ಸುವರ್ಣಾವಕಾಶವನ್ನು ಒದಗಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯ. ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನವರ ಪ್ರೋತ್ಸಾಹವಂತೂ ನನಗೆ ದಾರಿದೀಪ.

ಇದೇ ವಿಭಾಗದ ನಿರ್ದೇಶಕರಾದ ಶ್ರೀಮಾನ್ ಚೆನ್ನವೀರ ಕಣವಿಯವರು ನನ್ನ ವಿಷಯವನ್ನು ಬಹುವಾಗಿ ಮೆಚ್ಚಿಕೊಂಡು ಇದರ ಮಾಹಿತಿ ಸಾಮಾನ್ಯ ಜನರಿಗೂ ಆಗಲೆಂದು ಹಾರೈಸಿ ತಮ್ಮ ವಿಭಾಗದ ಅಧಿಕಾರವರ್ಗದವರಿಗೆ ಕಾರ್ಯತತ್ಪರರಾಗಲು ನಿರ್ದೇಶಿಸಿ, ನನ್ನ ಕಾರ್ಯ ಸುಗಮವಾಗಿ ಸಾಗಲು ಸದವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಅನಂತ ನಮಸ್ಕಾರಗಳು.

ಈ ಸಂದರ್ಭದಲ್ಲಿ ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕರು ನನ್ನ ಕಿರುಹೊತ್ತಿಗೆಯ ಮುದ್ರಣದ ಜವಾಬ್ದಾರಿಯನ್ನು ವಹಿಸಿಕೊಂಡು ಹೊತ್ತಿಗೆಯು ಹೊರಬೀಳಲು ಸಾಕಷ್ಟು ಶ್ರಮವಹಿಸಿ ನನ್ನಲ್ಲಿರುವ ಜ್ಞಾನ ಪ್ರಸಾರವಾಗುವಂತೆ ಮಾಡಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು,

ಇದಕ್ಕೆಲ್ಲಾ ಒಂದು ಆಧಾರಸ್ತಂಭದಂತೆ ಇರುವ, ಕನ್ನಡದ ಏಳ್ಗೆಗಾಗಿ ಸತತವಾಗಿ ಶ್ರಮಿಸುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀಮಾನ್ ಎಸ್. ಎಸ್. ಒಡೆಯರವರು ನನಗೊಂದು ಅಪೂರ್ವ ಅವಕಾಶವನ್ನು ಒದಗಿಸಿಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಿನಯಪೂರ್ವಕ ನಮಸ್ಕಾರಗಳು.

ಕನ್ನಡದಲ್ಲಿ ಬಿಡಿಲೇಖನಗಳನ್ನು, ಪಠ್ಯಪುಸ್ತಕಗಳನ್ನು ಬರೆಯು ವಂತೆ ಹಾಗೂ ಉಪನ್ಯಾಸಗಳನ್ನು ಕೊಡಲು ಹುರುದುಂಬಿಸಿದವ ರಲ್ಲಿ ಮೊದಲಿಗರಾದ ನನ್ನ ಪೂಜ್ಯ ಗುರುಗಳಾದ ಡಾ. ಎಸ್. ಬಿ. ಮಠದ ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆಯೆ. ಈ ಕಿರುಹೊತ್ತಿಗೆ ಬರೆಯುವ ಒಂದು ಹವಣಿಕೆಯಲ್ಲಿರುವಾಗ ಹಾವು ಗಳ ಬಗೆಗೆ ಶ್ರೀ ವ್ಹಿಟಕರರು ಬರೆದ ಹೊತ್ತಿಗೆಯನ್ನು ಹೊತ್ತಿಗೆ ಸರಿಯಾಗಿ ನನಗೆ ಕೊಟ್ಟು ನನ್ನ ಕಾರ್ಯವು ಸುಗಮವಾಗಿ ಮುಂದು ವರಿಯಲು ಮಾರ್ಗದರ್ಶನಮಾಡಿದರು. ಅಲ್ಲದೆ ನನ್ನ ಹಸ್ತಪ್ರತಿ ಯಲ್ಲಿ ಕೆಲವು ಸೂಕ್ತ ತಿದ್ದುಪಡಿಮಾಡಲು ಯೋಗ್ಯ ಮಾರ್ಗ ದರ್ಶನವನ್ನು ಮಾಡಿದ್ದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಸಂಗೀತ ಪ್ರಾಧ್ಯಾಪಕರಾದ ಶ್ರೀ ಏ. ಯು. ಪಾಟೀಲ ಅವರು ನನ್ನ ಉಪನ್ಯಾಸಕ್ಕೆ ಅನುಕೂಲವಾಗುವಂತೆ ವಿಷಸರ್ಪಗಳ ವರ್ಣಚಿತ್ರಗಳನ್ನು ತಯಾರಿಸಿಕೊಟ್ಟಿದ್ದಕ್ಕಾಗಿ ಅವರ ಉಪಕಾರ ವನ್ನು ನಾನು ಸ್ಮರಿಸದೇ ಇರಲಾರೆ.

ನಮ್ಮ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸುಮಂಗಲಾದೇವಿ ಎಸ್. ಮಠದ ಅವರು ಈ ಕಿರುಹೊತ್ತಿಗೆಗಾಗಿ ಹಸ್ತಪ್ರತಿ ತಯಾರಿಸಲು ಅನೇಕ ರೀತಿಯಿಂದ ನೆರವಾಗಿ ಅಲ್ಲಲ್ಲಿ ಕೆಲವು ಸೂಕ್ತ ಮಾರ್ಪಾಡುಗಳನ್ನು ಮಾಡಲು ಯೋಗ್ಯ ಸಲಹೆ ನೀಡಿ ನನ್ನನ್ನು ಪ್ರೋತ್ಸಾಹಿಸಿದ್ದಕ್ಕಾಗಿ ನಾನು ಅವರಿಗೆ ಚಿರಋಣಿ.

ಚಿರಂಜೀವಿ ಮಾಲತೇಶ ಮೋಟೆಬೆನ್ನೂರ ಈ ಹೊತ್ತಿಗೆಗೆ ಬೇಕಾದ ವೈಜ್ಞಾನಿಕ ಮತ್ತು ಸುಂದರವಾದ ಚಿತ್ರಗಳನ್ನು ಒದಗಿಸಿಕೊಟ್ಟದ್ದಕ್ಕಾಗಿ ಇವನನ್ನು ಅಭಿನಂದಿಸದೇ ಇರಲಾರೆ.

ಸಂಯುಕ್ತ ಕರ್ನಾಟಕ, ಪ್ರಪಂಚ, ಪ್ರಜಾಮತ, ಕಸ್ತೂರಿ (ಎಪ್ರಿಲ್ ೧೯೭೯) ಮತ್ತು ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ (Illustrated weekly of India) ಈ ಎಲ್ಲ ದಿನ ಪತ್ರಿಕೆ, ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳ ಸಹಾಯವು ನನ್ನ ಕಿರುಹೊತ್ತಿಗೆಗೆ ಸಾಕಷ್ಟು ಆಗಿದೆ. ಇವುಗಳ ಸಂಪಾದಕರಿಗೆ ಹಾಗೂ ಲೇಖನಗಳನ್ನು ಬರೆದ ಮಹನೀಯರಿಗೆ ನನ್ನ ಕೃತಜ್ಞತೆಗಳು.

ಪ್ರಾಣಿಶಾಸ್ತ್ರ ವಿಭಾಗ,
ಕರ್ನಾಟಕ ವಿಜ್ಞಾನ
ಮಹಾವಿದ್ಯಾಲಯ
ಧಾರವಾಡ
೨-೧೦-೧೯೭೯

ಎನ್. ಟಿ. ಮೋಟೆಬೆನ್ನೂರ

೧. ಪೂರ್ವ ಪೀಠಿಕೆ

ಹಾವು ಎಂದಾಕ್ಷಣವೇ ಹೌಹಾರಿ, ಬೆಚ್ಚಿಬೀಳುವುದೇಕೆ ? ಹಾವೊಂದು ವಿಷಜಂತು, ಕೆಟ್ಟಪ್ರಾಣಿ, ಅದು ಕಚ್ಚಿದರಂತೂ ಪ್ರಾಣಕ್ಕೆ ಅಪಾಯ, ಅದರ ಬಗೆಗೆ ಎಲ್ಲಿಲ್ಲದ ಭಯ. ಅದು ಮಾನವನ ಶತ್ರು ಎಂಬ ತಪ್ಪು ಕಲ್ಪನೆಗಳೆ ಇದಕ್ಕೆ ಕಾರಣ. ಇಂತಹ ತಪ್ಪು ವಿಚಾರಗಳನ್ನು ಮತ್ತು ಹಾವಿನ ಬಗೆಗೆ ಇರುವ ಭಯವನ್ನು ಹೋಗಲಾಡಿಸಬೇಕೆಂಬುದೇ ನನ್ನ ಈ ಕಿರಿಹೊತ್ತಿಗೆಯ ಮುಖ್ಯ ಉದ್ದೇಶ.

ಹಾವು ಎಂಬ ಶಬ್ದವನ್ನು ನಮ್ಮ ಪ್ರತಿನಿತ್ಯ ಜೀವನದಲ್ಲಿ ಬಳಸುತ್ತೇವೆ. ನಮಗೆ ಹಸಿವೆಯಾದರೆ, ಹೊಟ್ಟೆಹಸಿದು ಹಾವಾಗಿದೆ, ಅಂಕುಡೊಂಕಾಗಿ ಸಾಗಿದ ದಾರಿ ಹಾವಿನಂತೆ ಇದೆ, ನದಿಯು ಹಾವಿನಂತೆ ಹರಿಯುತ್ತಿದೆ ಎಂದು ಅನ್ನುವದುಂಟು. ಕೂಸು ಹೊಸೆಯುವದನ್ನು ಕಂಡ ಅದರ ತಾಯಿ "ನೋಡೆ, ಅಕ್ಕಾ ನನ್ನ ಕೂಸು ಹಾವು ಹರಿದಾಡಿದ ಹಾಗೆ ಹರದಾಡುತ್ತದೆ" ಎಂದು ಉದ್ಗಾರ ಹೊರಡಿಸುವಳು. ರಸ್ತೆಯು ಬಹಳ ಜಾರುತ್ತಿದ್ದರೆ "ಇದೇನೆಪ್ಪಾ, ದಾರಿಮ್ಯಾಲೆ ನಡೆಯೂದ ಅಂದರ ಹಾವಿನ ತಲೆ

ಮ್ಯಾಲೆ ಕಾಲಿಟ್ಟ ಹಾಗೆ" ಅನ್ನುವದು ಉಂಟು. ಸುಳ್ಳಾಡುವವನ ನಾಲಿಗೆಯನ್ನು ಹಾವಿನ ನಾಲಿಗೆಗೆ ಹೋಲಿಸಿದರೆ, ದುಷ್ಟವ್ಯಕ್ತಿಯನ್ನು ವಿಷದ ಹಾವಿಗೆ ಹೋಲಿಸುವುದು ವಾಡಿಕೆಯಾಗಿದೆ. ಯಾರಾದರೂ ಕುಳಿತ ಸ್ಥಾನದಿಂದಲೇ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಆರಂಭಮಾಡಿದರೆ ಕುಳಿತಲ್ಲೆ ಹಾವಾಡಿಸುವವನೆಂದೂ ಕರೆಯುತ್ತಾರೆ. ಹುತ್ತುಬಡಿದರೆ ಹಾವು ಸಾಯದು ಎಂಬ ಮಾತೂ ಇದೆ.

ಹಾವುಗಳು ಕೂಡ ನಮ್ಮ ಹಾಗೆ ಪ್ರಾಣಿಗಳು, ಅವಕ್ಕೂ ನಮ್ಮಂತೆ ನಿಸರ್ಗದಲ್ಲಿ ಬದುಕುವ ಹಕ್ಕಿದೆ ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಹಾವುಗಳಿಂದ ನಮಗೆ ಹಾನಿಗಳಿಗಿಂತ ಲಾಭಗಳೇ ಹೆಚ್ಚು. ಅವು ಕಚ್ಚುವುದು ಕೇವಲ ತಮ್ಮ ಆತ್ಮರಕ್ಷಣೆಗಾಗಿ. ಹಾವು ಎಂಬ ಶಬ್ದವು ಕಿವಿಗೆ ಬಿದ್ದೊಡನೆಯೇ "ಅದು ಎಲ್ಲಿದೆ ಕೊಲ್ಲಿರಿ. ಅದನ್ನು ಹಾಗೆಯೇ ಜೀವಂತ ಬಿಡಬೇಡಿ" ಎನ್ನುತ್ತಾ ಜನರು ಕಲ್ಲನ್ನೊ, ಕೋಲನ್ನೊ, ಭರ್ಚಿಯನ್ನೊ ಇಲ್ಲವೆ ಬಂದೂಕನ್ನೊ ತೆಗೆದುಕೊಂಡು ಯುದ್ಧಕ್ಕೆ ಹೊರಡುವಂತೆ ಜನರ ಒಂದು ತಂಡವೆ ಸನ್ನದ್ಧವಾಗಿ ನಿಲ್ಲುವದು. ಇಷ್ಟೆಲ್ಲಾ ಬೊಬ್ಬಾಟ, ಹಾಹಾಕಾರ ಮಾಡುವದಕ್ಕಿಂತ ಹಾವನ್ನು ಅದರ ಪಾಡಿಗೆ ಬಿಟ್ಟರೆ ನಮಗದು ಏನೂ ಅಪಾಯ ಮಾಡಲಾರದು. ಎಷ್ಟೋ ಸಂದರ್ಭಗಳಲ್ಲಿ ಹಾವು ಮೈಮೇಲೆ ಬಂದು ಅಪಾಯ ಮಾಡಲಾರದೇ ಹೋದ ಉದಾಹರಣೆಗಳು ಉಂಟು. ಹಾವುಗಳ ವಿಷಯವಾಗಿ ವೈಜ್ಞಾನಿಕ ವ್ಯಾಸಂಗ ಮಾಡಿದಂತೆ ನಮ್ಮಲ್ಲಿ ಅವುಗಳ ಬಗೆಗೆ ಸರಿಯಾದ ತಿಳುವಳಿಕೆ ಸಹಜವಾಗಿ ಮೂಡುತ್ತದೆ.

ಹಾವುಗಳು ಅನವಶ್ಯಕವಾಗಿ ಕಚ್ಚುವವು ಎಂಬ ಮೂರ್ಖ ವಿಚಾರ ವಂತೂ ನಮ್ಮಲ್ಲಿ ಬರಲೇಬಾರದು. ಸರ್ಪವನ್ನು ಕಂಡಾಗ ಅದನ್ನು ಕೊಲ್ಲದೆ ಅದರ ಬಗ್ಗೆ ಆಳವಾದ ಅಭ್ಯಾಸ ಮಾಡುವ ಪ್ರಯತ್ನ ನಾನು ಮಾಡಿದ್ದೇನೆ. ಎಲ್ಲಿಯಾದರೂ ನನಗೊಂದು ಹಾವು ಕಂಡಿತೆಂದರೆ ನಾಲ್ಕು ಜನರನ್ನು ಕೂಡಿಸಿ ಕೊಲ್ಲಿಸುವ ಬದಲು ಅದನ್ನು ನೋಡಿ ಅದರ ಚಟುವಟಿಕೆಗಳ ಆನಂದವನ್ನು ಸವಿಯುವದು ನನ್ನ ಒಂದು ಪ್ರವೃತ್ತಿ. ಹೀಗಾಗಿ ನನ್ನ ದೃಷ್ಟಿಗೆ ಬಿದ್ದ ಎಷ್ಟೋ ಹಾವುಗಳು ಬದುಕಿ ಉಳಿಯಬಲ್ಲವು ಎಂದು ನನ್ನ ಆಶೆ. "ದುಡುಕಿದವನು ದುಃಖಕ್ಕೆ ಈಡಾಗುವನು" ಎಂಬಂತೆ ನಮ್ಮ ದುಡಿಕಿನಿಂದ ಹಾವುಗಳ ಪೀಳಿಗೆಯೇ ಅಳಿಯುತ್ತಾ ಹೋದರೆ ನಮಗೆ ಶಾಶ್ವತವಾದ ಹಾನಿ ತಪ್ಪದು. ಮಾನವನು ನಿಸರ್ಗವನ್ನು ಗೆಲ್ಲಲು ಹೊರಟು ಅನೇಕ ಅನರ್ಥಗಳನ್ನು ಎಸಗು ತ್ತಾನೆ. ಹಾಗಾಗದಂತೆ ನಾವೆಲ್ಲ ಎಚ್ಚರಿಕೆ ವಹಿಸಬೇಕು.

ಹಾವನ್ನು ಕಂಡಾಗ "ಕೊಲ್ಲು" ಎನ್ನುವ ಕಾಲವೊಂದಿತ್ತು. ಹಾವಿನ ವಿಜ್ಞಾನ ವ್ಯಾಸಂಗ ಮುಂದುವರಿದಂತೆ "ಹಾವನ್ನು ರಕ್ಷಿಸು" ಎಂಬ ಪ್ರಚಾರ ಈಗ ಆರಂಭವಾಗಿದೆ. ಇಂತಹ ಪ್ರಚಾರ, ಪ್ರಚಾರ ಮಾತ್ರವಾಗಿ ಉಳಿಯದೇ ಕಾರ್ಯಗತವಾಗಬೇಕು. "ಪರೋಪಕಾರಾರ್ಥಂ ಇದಂ ಶರೀರಂ" ಎಂದು ಸರ್ಪಗಳು ಮಾನವನಿಗೆ ಪ್ರತ್ಯಕ್ಷವಾಗಿಯೂ ಮತ್ತು ಅಪ್ರತ್ಯಕ್ಷವಾಗಿಯೂ ಉಪಕಾರವನ್ನೇ ಮಾಡುತ್ತಲಿವೆ. ಆದರೆ ನಾವು ಮಾತ್ರ ಅವುಗಳ ವಿಷಯವಾಗಿ ಬಹು ಕ್ರೂರ ರೀತಿಯಿಂದ ವರ್ತಿಸುತ್ತಿದ್ದೇವೆ. ಹೆದರಿಕೆ, ಅಜ್ಞಾನ, ದುರಾಸೆ ಇತ್ಯಾದಿಗಳ ಪರಿಣಾಮ

ವಾಗಿ ಮಾನವ ಜನಾಂಗಕ್ಕೆ ಸಹಾಯಕಾರಿಯಾಗಿಯೇ ಬಾಳುವ ಹಾವುಗಳನ್ನು ವಿನಾಕಾರಣ ನಾಶಪಡಿಸಲಾಗುತ್ತಿದೆ.

ಹಾವುಗಳ ಮಹತ್ವವನ್ನು ಅರಿತುಕೊಂಡ ಮೇಲಾದರೂ ಅವುಗಳನ್ನು ರಕ್ಷಿಸುವ ಹೊಣೆಯನ್ನು ಎಲ್ಲರೂ ಹೊತ್ತುಕೊಂಡರೆ ನಿಸರ್ಗದ ಒಂದು ಸಂಪತ್ತನ್ನು ಕಾಪಾಡಿಕೊಂಡು ಬಂದಂತೆ ಆಗುತ್ತದೆ. ಇದಕ್ಕಾಗಿ ನಾವೆಲ್ಲರೂ ಪಣತೊಡಲೇಬೇಕು,

೨. ಹಾವುಗಳ ಪರಿಚಯ

ಆರ್ಕ್‌ಟಿಕ್ (Arctic), ನ್ಯೂಝಿಲಂಡ್ (Newzealand) ಮತ್ತು ಐರ್ಲೆಂಡ್ (Ireland) ದೇಶಗಳಲ್ಲಿ ಹಾವುಗಳೇ ಇಲ್ಲ. ಇವು ಕಶೇರಕ ವರ್ಗಕ್ಕೆ ಸೇರಿದ, ಶೀತರಕ್ತದ, ಹಲ್ಲಿಗಳಿಗೆ ಹತ್ತಿರ ಸಂಬಂಧಿಗಳಾದ ಸರೀಸೃಪಗಳು. ನೀಳವಾದ ದೇಹದಲ್ಲಿ ಶಿರ, ಮುಂಡ ಮತ್ತು ಬಾಲ ಈ ಪ್ರಕಾರ ಮೂರು ಮುಖ್ಯವಾದ ಭಾಗಗಳಿರುತ್ತವೆ. ಕೆಲವು ಸರ್ಪಗಳಿಗೆ ನಿರ್ದಿಷ್ಟವಾದ ಕುತ್ತಿಗೆ ಇರುತ್ತದೆ. ಹಾವುಗಳಿಗೆ ಚಲನಾಂಗಗಳಿಲ್ಲ. ತಮ್ಮ ಹೊಟ್ಟೆಯ ಮುಖಾಂತರ ತೆವಳುವವರಿಂದ ಇವಕ್ಕೆ ಉರಗಗಳೆಂದೂ ಕರೆಯುತ್ತಾರೆ. ಹೆಬ್ಬಾವುಗಳಲ್ಲಿ ಮಾತ್ರ ಗುದದ್ವಾರದ ಹತ್ತಿರವೇ ಕಾಲುಗಳ ಅವಶೇಷಗಳಿರುತ್ತವೆ. ಇವು ಉಗುರಿನ ರೂಪದಲ್ಲಿರುತ್ತವೆ. ಈ ಅವಶೇಷಗಳ ಆಧಾರದಿಂದಲೇ ಹಾವು

ಗಳು ಹಲ್ಲಿಗಳಂತಹ ಪ್ರಾಣಿಗಳಿಂದ ಕಾಲಾನುಕ್ರಮದಲ್ಲಿ ವಿಕಾಸ ಹೊಂದಿ ಉದ್ಭವಿಸಿರಬಹುದೆಂಬ ಸಿದ್ಧಾಂತವನ್ನು ಲೈಮಾರ್ಕ್ (Lamarck) ಎಂಬ ವಿಜ್ಞಾನಿ ವರ್ಣಿಸಿದ್ದಾನೆ. ನಮಗೆ ಹೆಬ್ಬಾವನ್ನು ಕತ್ತರಿಸುವ ಒಂದು ಪ್ರಸಂಗ ಒದಗಿತ್ತು. ನನ್ನಲ್ಲಿ ಹಿಂಗಾಲುಗಳ ಅವಶೇಷಗಳನ್ನು ನೋಡುವ ಕುತೂಹಲವಿತ್ತು. ಉಗುರುಗಳು ನಮಗೆ ದೊರಕಿದವು, ಅಲ್ಲದೆ ಮೈಮೇಲೆ ಕೆಲವು ಉಣ್ಣೆಗಳೂ (Tick) ಸಿಕ್ಕವು. ಕಾಲಿನ ಅವಶೇಷಗಳು ಇದ್ದರೂ ಅವು ಚಲನೆಯಲ್ಲಿ ಪಾತ್ರವಹಿಸುವದಿಲ್ಲ. ಪಕ್ಕೆಲಬು(Rib)ಗಳು, ಉದರ ಫಲಕ (Bellyplate)ಗಳು ಮತ್ತು ಪಕ್ಕೆಲಬುಗಳಿಗೆ ಸೇರಿದ ಮಾಂಸಖಂಡಗಳು ಚಲನಕ್ಕೆ ನೆರವಾಗುತ್ತವೆ. ದೇಹದ ಮೇಲೆಲ್ಲಾ ಹುರುಪೆ(Scale)ಗಳಿಂದಾದ ಪೊರೆ ಇರುವದು. ಹುರುಪೆಗಳು ಅಳತೆಯಿಂದ ದೊಡ್ಡಪ್ರಮಾಣದವು ಆಗಿದ್ದರೆ ಅವಕ್ಕೆ ಫಲಕ(Shield)ಗಳೆಂದು ಕರೆಯುವರು. ಉದಾ: ಶಿರಫಲಕಗಳು ಮತ್ತು ಉದರ ಫಲಕಗಳು, ಹುರುಪೆ, ಫಲಕಗಳು, ತಲೆಯ ಆಕಾರ ಮತ್ತು ಬಾಲದ ಆಕಾರ ಇವು ವಿವಿಧ ಹಾವುಗಳನ್ನು ನಿಖರವಾಗಿ ಗುರ್ತಿಸಲು ಅತಿ ಮಹತ್ವದ ಪಾತ್ರವಹಿಸುತ್ತವೆ. ಹಾವಿನ ತಲೆ ಸಾಮಾನ್ಯವಾಗಿ ಚಿಕ್ಕದು; ತಲೆಯ ಮುಂಭಾಗದಲ್ಲಿ ಅಗಲವಾದ ಬಾಯಿ, ಎರಡು ಮೂಗಿನ ಹೊರಳೆಗಳು (Nostrils) ಮತ್ತು ಪಾರದರ್ಶಕ ರೆಪ್ಪೆಗಳಿಂದ ಆವರಿಸಲ್ಪಟ್ಟ ಎರಡು ಕಣ್ಣುಗಳು ಯಾವಾಗಲೂ ತೆರೆದುಕೊಂಡಂತೆಯೇ ಕಾಣುತ್ತವೆ. ಹೊರಕಿವಿಗಳು ಮತ್ತು ಕಿವಿಯ ತಮಟೆಗಳು ಇರುವದಿಲ್ಲ. ಕಣ್ಣಿನ ಹಿಂದುಗಡೆ ಒಳಕಿವಿಗಳಿರುತ್ತವೆ. ಸೀಳಿದ ನಾಲಿಗೆಯು ಈ ಜಾತಿಯ ವಿಶೇಷ ಲಕ್ಷಣ. ಹಾವು ಬಾಯಿಯನ್ನು ಮುಚ್ಚಿ

ಕೊಂಡೇ ನಾಲಿಗೆಯನ್ನು ಮೇಲಿಂದ ಮೇಲೆ ಹೊರಚಾಚುತ್ತವೆ ನಾಲಿಗೆಯು ರುಚಿಯನ್ನು ತಿಳಿಸುವ ಅಂಗವಲ್ಲ. ಒಂದು ಬಗೆಯ ಜ್ಞಾನಾಂಗ. ನಾಲಿಗೆಯ ಸಹಾಯದಿಂದಲೇ ಸರ್ಪಗಳು ಸುತ್ತಲಿನ ಪರಿಸ್ಥಿತಿಯನ್ನು ಅರಿತುಕೊಳ್ಳುತ್ತವೆ. ಪರಿಸರದ ವಿವಿಧ ವಾಸನೆಗಳನ್ನು ತಿಳಿದುಕೊಳ್ಳುತ್ತವೆ. ಹಾವುಗಳ ಮೈದೊಗಲು ಸೂಕ್ಷ್ಮಗ್ರಾಹಿಯಾಗಿದ್ದು ಭೂಮಿಯ ಅತಿ ಸೂಕ್ಷ್ಮ ಕಂಪನ ಗಳನ್ನು ಗುರುತಿಸಬಲ್ಲದು. ಶಬ್ದತರಂಗಗಳು ಭೂಮಿಯನ್ನು ಅನುಸರಿಸಿ ಚರ್ಮದ ಮುಖಾಂತರ ಒಳಕಿವಿಯನ್ನು ಸೇರುವದ ರಿಂದ ಮಾತ್ರ ಹಾವಿಗೆ ಶಬ್ದದ ಅರಿವಾಗುತ್ತದೆ.

ದವಡೆಗಳು :

ಹಾವಿಗೆ ಎರಡು ದವಡೆಗಳಿರುತ್ತವೆ. ಕೆಳದವಡೆಯಲ್ಲಿ ಎರಡು ಭಾಗಗಳಿರುತ್ತವೆ, ಈ ದವಡೆಯ ಎರಡೂ ಭಾಗಗಳ ತುದಿಗಳು ಒಂದರೊಡನೊಂದು ಸೇರಿರುವದಿಲ್ಲ. ಈ ತುದಿಗಳನ್ನು ಸ್ಥಿತಿಸ್ಥಾಪಕತ್ವವುಳ್ಳ ಒಂದು ಸ್ನಾಯು ಬಂಧಿಸುತ್ತದೆ. ತಲೆ ಬುರುಡೆಯ ವಿವಿಧ ಮೂಳೆಗಳು ಸಡಿಲಾಗಿ ಹೊಂದಿಕೊಂಡಿರು ವರಿಂದಲೇ ಹಾವು ಬಾಯಿಯನ್ನು ಬಹು ಅಗಲವಾಗಿ ತೆರೆಯ ಬಲ್ಲವು. ಹಾವಿನ ದವಡೆಗಳು ಹಲವಾರು ವಿಕಸನ ಹೊಂದುವ ಕೀಲುಗಳಿಂದ ಜೋಡಿಸಲ್ಪಟ್ಟಿರುತ್ತವೆ.

ಹಲ್ಲುಗಳು:

ಎರಡೂ ದವಡೆ ಮತ್ತು ಪ್ಯಾಲೆಟ್ (Palate)ಗಳಲ್ಲಿ ಚೂಪಾದ ಮತ್ತು ಹಿಂದಕ್ಕೆ ಬಾಗಿದ ಹಲ್ಲುಗಳಿರುತ್ತವೆ. ಈ

ಹಲ್ಲುಗಳು ವಿವಿಧ ಅಳತೆಯುವು. ಹಲ್ಲುಗಳು ಆಹಾರವನ್ನು ಜಗಿಯಲು ಸಹಾಯ ಮಾಡದೆ, ಬಾಯಿಗೆ ಸಿಕ್ಕ ಪ್ರಾಣಿಯು ತಪ್ಪಿಸಿಕೊಳ್ಳದಂತೆ ಹಿಡಿದು ಅದನ್ನು ಒಳನೂಕಲು ಸಹಾಯ ಮಾಡುತ್ತವೆ. ವಿಷರಹಿತ ಹಾವುಗಳ ದಂತಗಳು ಗಟ್ಟಿಯಾಗಿರುವವು, ವಿಷದ ಹಾವುಗಳಲ್ಲಿ ಮೇಲ್ದವಡೆಯ ಮುಂಭಾಗದಲ್ಲಿ ಎರಡು, ಕೆಲವದರಲ್ಲಿ ನಾಲ್ಕು ಹಲ್ಲುಗಳು(ಚಿತ್ರದಲ್ಲಿ ತೋರಿಸಿದಂತೆ)



ಚಿತ್ರ ೧. ಮಂಡಲದ ಹಾವಿನ ತಲೆ

ದೊಡ್ಡವು ಹಾಗೂ ಟೊಳ್ಳಾಗಿರುವವು. ಈ ವಿಷದಂತಗಳು ವಿಷವನ್ನು ಗಾಯದಲ್ಲಿ ಸೇರಿಸಲು ಮಹತ್ವದ ಪಾತ್ರವನ್ನು ವಹಿಸುವವು. (ವಿಷದಂತಗಳ ಬಗೆಗೆ ವಿವರವಾದ ಮಾಹಿತಿಯನ್ನು ವಿಷದ ಹಾವುಗಳ ಪರಿಚಯ ಪ್ರಕರಣದಲ್ಲಿ ಕೊಡಲಾಗಿದೆ).

ಎಲ್ಲ ಸರ್ಪಗಳು ಸಾಮಾನ್ಯವಾಗಿ ಮಾಂಸಾಹಾರಿಗಳು. ಅನೇಕ ಪದಾರ್ಥಗಳನ್ನು ನಾಶಮಾಡುವ ಇಲಿಗಳು ಇವುಗಳ ಪ್ರೀತಿಯ ಆಹಾರ. ಇವಲ್ಲದೆ ಕಪ್ಪೆ, ಪಕ್ಷಿಗಳು, ಅವುಗಳ ಮೊಟ್ಟೆ, ಹಲ್ಲಿಗಳು ಮತ್ತು ಕೀಟಕಗಳು ಕೂಡ ಆಹಾರದಂತೆ ಉಪಯೋಗವಾಗುತ್ತವೆ. ನೀರಹಾವಿಗೆ ಮೀನಗಳೇ ಮುಖ್ಯ ಆಹಾರ. ಮೊಟ್ಟೆಗಳನ್ನು ಇಟ್ಟು ಮರಿಮಾಡುವ ಅನೇಕ ಹಾವುಗಳಿದ್ದರೆ ಕೆಲವು ಹಾವುಗಳ ಮೊಟ್ಟೆಗಳು ಶರೀರದಲ್ಲಿಯೇ ಒಡೆದು ಮರಿಗಳು ಹೊರಬರುವವು.

ಭೂಮಿಯಲ್ಲಿ ವಾಸಿಸುವ ಹಾವುಗಳೇ ಬಹಳ. ಕೆಲವು ಗಿಡದ ಮೇಲೆಯೂ ವಾಸಿಸುತ್ತವೆ. ನೀರಹಾವು ಮತ್ತು ಕಡಲ ಹಾವುಗಳು ತಮ್ಮ ಬಾಲದ ಸಹಾಯದಿಂದ ಚೆನ್ನಾಗಿ ಈಜ ಬಲ್ಲವು.

೩. ಹಾವುಗಳ ಮಹತ್ವ :

ಪುರಾಣದಲ್ಲಿಯೂ ಕೂಡ ಹಾವುಗಳು ಅನೇಕ ಸಂದರ್ಭಗಳಲ್ಲಿ ಉಪಯೋಗವಾದುದರ ಬಗೆಗೆ ದಂತಕಥೆಗಳಿವೆ. ಶಿವನು ನಾಗರ ಹಾವನ್ನು ಹಾರವನ್ನಾಗಿ ಮಾಡಿ ತನ್ನ ಕುತ್ತಿಗೆಯನ್ನು ಶೃಂಗರಿಸಿ ಕೊಂಡಿದ್ದರೆ, ವಿಷ್ಣು ಪರಮಾತ್ಮನು ಆದಿಶೇಷನನ್ನು ಹಾಸಿಗೆಯಂತೆ

ಉಪಯೋಗಿಸಿರುವನು. ಗಣೇಶನ ಹೊಟ್ಟೆಯು ಒಡೆದು ಮೋದಕಗಳು ಹೊರಬಿದ್ದಾಗ ಅವುಗಳನ್ನು ಪುನಃ ಹೊಟ್ಟೆಯಲ್ಲಿ ಸೇರಿಸಿಕೊಂಡು ನಾಗಸರ್ಪವನ್ನು ಬಿಗಿದುಕೊಂಡನಂತೆ. ದೇವತೆಗಳು ಮತ್ತು ರಾಕ್ಷಸರು ಸಮುದ್ರಮಥನ ಮಾಡುವಾಗ ಮೇರು ಪರ್ವತವನ್ನು ಕಡೆಯುವ ಕೋಲಿನಂತೆಯೂ. ಆದಿಶೇಷನನ್ನು ಹಗ್ಗದಂತೆಯೂ ಉಪಯೋಗಿಸಿಕೊಂಡರಂತೆ. ಏಳುಕೊಳ್ಳದ ಎಲ್ಲಮ್ಮನು ಒಂದು ಸಂದರ್ಭದಲ್ಲಿ ಹಾವನ್ನು ಸಿಂಬೆಯನ್ನಾಗಿ ಮಾಡಿಕೊಂಡಿದ್ದಳೆಂದೂ ಹೇಳುತ್ತಾರೆ. ಹಾವುಗಳ ಬಗೆಗೆ ನಮ್ಮೆಲ್ಲರಲ್ಲಿ ಪೂಜ್ಯಭಾವನೆ ಬರುವ ಬದಲು ಸೇಡಿನ ಮನೋವೃತ್ತಿ ಬೆಳೆಯುತ್ತಿರುವದು ಸೋಜಿಗವಾಗಿದೆ. ಇತ್ತೀಚೆಗೆ ಮಾತ್ರ ಹಾವುಗಳ ಪ್ರಯೋಜನದ ಬಗ್ಗೆ ಮಾನವನಿಗೆ ಮನವರಿಕೆ ಆಗ ತೊಡಗಿದೆ.

(ಅ) ಇಲಿ ಹೆಗ್ಗಣಗಳ ನಿಯಂತ್ರಣ

ಇಲಿಯಂತೂ ಒಂದು ಧ್ವಂಸಕ ಪ್ರಾಣಿ. ಸಿಕ್ಕ ಪದಾರ್ಥಗಳನ್ನು ಕಡಿದು ಕೆಡಿಸುವದೊಂದು ಅದರ ಕೆಟ್ಟ ಸ್ವಭಾವ. ಕೆಲವನ್ನು ಹೊಟ್ಟೆತುಂಬಿಕೊಳ್ಳಲು ಉಪಯೋಗಿಸಿದರೆ, ಇನ್ನಿತರ ಪದಾರ್ಥಗಳನ್ನು ತನ್ನ ಹಲ್ಲುಗಳನ್ನು ಮಸೆಯಲು ಉಪಯೋಗಿಸುತ್ತದೆ. ಇಷ್ಟೇ ಅಲ್ಲದೆ ಇಲಿಗಳು ಪ್ಲೇಗರೋಗವನ್ನು ಪ್ರಸಾರ ಮಾಡುವ ಸೂಕ್ಷ್ಮ ರೋಗಜಂತುಗಳನ್ನು ಹೊಂದಿರುವಂತಹ ಚಿಕ್ಕಾಡು (Flea)ಗಳಿಗೆ ತಮ್ಮ ಮೇಲೆ ಆಶ್ರಯ ಕೊಡುತ್ತವೆ. ಸಲಿಮ ಅಲಿ (Salim Ali)ಯವರ ವಿವರಣೆಯಂತೆ ಭಾರತದಲ್ಲಿ

೧೦೦ಕ್ಕೆ ೨೦ ರಿಂದ ೩೦ರ ಪ್ರಮಾಣದಲ್ಲಿ ಕಾಳುಗಳನ್ನು ಇಲಿ ಹೆಗ್ಗಣಗಳು ನಾಶಮಾಡುತ್ತವೆ. ಕನ್ಹರಡ್ಟ (Kunhardt) ಎಂಬ ವಿಜ್ಞಾನಿ ೧೯೧೯ರಲ್ಲಿ ೨೦ ವರ್ಷಗಳ ಲೆಖ್ಖಹಾಕಿ ಕೆಳಗಿನ ಒಂದು ಅಂಕಿ ಅಂಶವನ್ನು ಒದಗಿಸಿದ್ದಾರೆ. ಅವರ ಪ್ರಕಾರ ಇಲಿಗಳಿಂದ ಒಟ್ಟು ೨೦ ವರ್ಷಗಲ್ಲಿ ೧೨೪೧ ಕೋಟಿ ರೂಪಾಯಿಗಳ ನಷ್ಟ ವಾಗಿದೆಯಂತೆ.

ನೀಲಗಿರಿಯ ಒಂದು ಚಹಾತೋಟದಲ್ಲಿ ಐದು ಲಕ್ಷ ರೂಪಾಯಿಗಳಷ್ಟು ನಷ್ಟಕ್ಕೆ ಇಲಿಗಳು ಕಾರಣೀಭೂತವಾದುದು ವರದಿಯಾಗಿದೆ. ಈ ತೋಟದ ಸುತ್ತಲಿನ ಅಡವಿಯನ್ನು ನಾಶ ಮಾಡಿದ್ದು ಇಲಿಗಳನ್ನು ಕಬಳಿಸುವ ಹಾವುಗಳ ಸಂಖ್ಯೆ ಕಡಿಮೆ ಯಾಗಲು ಮುಖ್ಯ ಕಾರಣ. ಹಾವುಗಳ ಸಂಖ್ಯೆ ಕಡಿಮೆಯಾದರೆ ಇಲಿಗಳ ಸಂಖ್ಯೆ ಸಹಜವಾಗಿಯೇ ಹೆಚ್ಚಾಗುತ್ತದೆ. ಭಾರತದಲ್ಲಿ ಮೂಷಕಗಳ ಸಂಖ್ಯೆ ಬಹುತರವಾಗಿ ೧೦೦೦೦ ದಶಲಕ್ಷ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಒಬ್ಬ ಮನುಷ್ಯನ ಹಿಂದೆ ೫ ಇಲಿಗಳು ಇವೆಯಂತೆ. ಕೆಲವು ವರದಿಗಳ ಪ್ರಕಾರ ೬ ಇಲಗಳು ಇವೆಯಂತೆ. ಕೆಲವೇ ವರ್ಷಗಳ ಹಿಂದೆ ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳಲ್ಲಿ ಇಲಿಗಳ ಸಂಖ್ಯೆ ಅತಿಯಾಯಿತು. ಇವು ಗಳನ್ನು ಸಂಹಾರ ಮಾಡಲು ಅಂದರೆ "ಮೂಷಕ ಸಂಹಾರ ಯಜ್ಞಕ್ಕಾಗಿ" ಸರಕಾರದವರು ಮಾನವನ ಶ್ರಮವನ್ನು ಬಳಸಿ ಕೊಂಡಿದ್ದಕ್ಕಾಗಿ ಸುಮಾರು ೬ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದ ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದೆ. ನಾಶವಾಗುವ

ದವಸ ಧಾನ್ಯ ರಕ್ಷಿಸಿದರೆ ನಮ್ಮ ದೇಶದ ಆಹಾರ ಕೊರತೆ ನೀಗಿ ಇನ್ನೂ ಉಳಿಯಬಹುದಾಗಿದೆ.

ನಾಗರ ಹಾವು ಮತ್ತು ಇತರ ವಿಷಕಾರಿ ಮತ್ತು ಅವಿಷ ಕಾರಿ ಹಾವುಗಳಿಂದ ಇಲಿಗಳ ಸಂತಾನ ಕಡಿಮೆಯಾಗುತ್ತದೆ. ಕೇರೆ ಹಾವಿಗಂತೂ ಇಲಿಗಳನ್ನು ಕಂಡರೆ ಎಲ್ಲಿಲ್ಲದ ಪ್ರೀತಿ– ನಮಗೆ ಗುಲಾಬಜಾಮೂನ ಇದ್ದಂತೆ. ಅದು ಇಲಿಗಳನ್ನು ಸುಲಭವಾಗಿ ಕೊಂದು ಹಾಕುತ್ತದೆ. ಅದಕ್ಕಾಗಿಯೇ ಈ ಹಾವಿಗೆ ಮೂಷಕ ಹಾವು (Rat snake) ಎಂದೂ ಕರೆಯುತ್ತಾರೆ. ಈ ಹಾವು ನಿಜವಾಗಿಯೂ ರೈತನ ಮಿತ್ರನೆ ಸರಿ. ಒಂದು ವರ್ಷದಲ್ಲಿ ಇದು ನೂರಾರು ಇಲಿಗಳನ್ನು ನುಂಗುವದು ಎಂದೂ ಹೇಳುತ್ತಾರೆ. ಇಲಿಗಳು ಪಾತಳಕ್ಕೆ ಹೋದರೂ ಈ ಹಾವು ಬೇತಾಳನಂತೆ ಅವನ್ನು ಹಿಡಿದು ನುಂಗಿಬಿಡುವದು. ಹಾವುಗಳು ಇಲಿಗಳನ್ನು ನಾಶಮಾಡುವದರಿಂದ ಅಪಾರ ಆಹಾರ ಧಾನ್ಯ ನಷ್ಟವಾಗುವದು ತಪ್ಪುವದು. ಇದೇ ಪ್ರಕಾರ ಹಾವುಗಳು ಹೆಗ್ಗಣಗಳನ್ನೂ ಸಂಹಾರಮಾಡಿ ಮಾನವನಿಗೆ ಆಗುವ ತೊಂದರೆಗಳನ್ನು ನಿವಾರಣೆಮಾಡುತ್ತವೆ. ಕೇರೆ ಹಾವಿನ ವಿಷಯವಾಗಿ ಓದುಗರಿಗೆ ನನ್ನ ಅನುಭವ ಒಂದನ್ನು ವಿವರಿಸುವೆ. ೧೯೭೭ನೆಯ ವರುಷ ಅಕ್ಟೋಬರ ೧೬ರಂದು ನಮ್ಮ ನೆರೆಹೊರೆಯ ಜನರು ಕೇರೆಹಾವನ್ನು ಕೊಂದು ಮುಖ್ಯ ಬೀದಿಯ ಹತ್ತಿರ ಆಲದ ಗಿಡದ ಬುಡದಲ್ಲಿ ಕಟ್ಟಿಗೆಗಳನ್ನು ಸಂಗ್ರಹಿಸಿ ಸುಡುವ ಹವಣಿಕೆಯಲ್ಲಿದ್ದರು. ನಾನು ಅದರ ಬಗ್ಗೆ ವಿಶೇಷ ಆಸ್ಥೆವಹಿಸಿ ಆ ಜನರ ಮನವೊಲಿಸಿ ಅದನ್ನು ನನ್ನ ವಶಕ್ಕೆ ತೆಗೆದು

ಕೊಂಡೆನು. ಅಷ್ಟರಲ್ಲಿಯೇ ಕರ್ನಾಟಕ ವಿಜ್ಞಾನ ಮಹಾ ವಿದ್ಯಾಲಯದ ಪ್ರಾಣಿ ಶಾಸ್ತ್ರವಿಭಾಗದ ಚರ್ಮತಜ್ಞ ಎಮ್. ಪಿ. ಮೋರೆ ಅಲ್ಲಿಗೆ ಬಂದರು. ಅವರಿಗೆ ಆ ಹಾವನ್ನು ಒಪ್ಪಿಸಿ, ತಕ್ಕ ಏರ್ಪಾಡು ಮಾಡಲು ತಿಳಿಸಿದೆನು. ಅವರ ಪ್ರಯತ್ನದಿಂದಾಗಿ ಆ ಸತ್ತ ಹಾವು ಈಗಲೂ ನಮ್ಮ ಪ್ರಾಣಿಶಾಸ್ತ್ರವಿಭಾಗದ ಪ್ರಾಣಿ ಸಂಗ್ರಹಾಲಯದಲ್ಲಿ ಜೀವಂತ ಹಾವಿನಂತೆಯೇ ಕಂಗೊಳಿಸುತ್ತದೆ. ಈ ಹಾವು ಸುಮಾರು ಎಂಟು ಅಡಿ ಉದ್ದವಾಗಿದೆ. ಇದರ ಬಗ್ಗೆ ಆಸ್ಥೆ ಇದ್ದವರು, ಧಾರವಾಡಕ್ಕೆ ಬಂದಾಗ ನಮ್ಮ ವಿಭಾಗಕ್ಕೆ ಬಂದು ಈ ಹಾವನ್ನು ನೋಡುವ ಸುವರ್ಣಾವಕಾಶವನ್ನು ಕಳೆದು ಕೊಳ್ಳಬಾರದು. ಇದೊಂದು ಅವಿಷಕಾರಿ ಹಾವು. (ವಿಷರಹಿತ ಹಾವು)ಅದೇ ಪ್ರಕಾರ ನಮ್ಮ ವಿಭಾಗದ ಪ್ರಾಣಿಸಂಗ್ರಹಾಲಯದಲ್ಲಿ ಕೇರೆಹಾವಿನ ಪೊರೆಯನ್ನು ಕೂಡ ಇರಿಸಲಾಗಿದೆ. ಈ ಪೊರೆಯು ಸಾಕಷ್ಟು ಉದ್ದವಾಗಿದ್ದು ಬಹು ಆಕರ್ಷಕವಾಗಿದೆ.

ಅಮೇರಿಕಾದಲ್ಲಿ ರ್‍ಯಾಟಲ್ ಹಾವು (Rattle Snake) ಉಪದ್ರವಿ ಮೊಲ, ಇಣಚಿ ಮತ್ತು ಇನ್ನಿತರ ಸಸ್ತನಿಗಳನ್ನು ಕೊಂದುಹಾಕುತ್ತದೆ. ಈ ಉಪದ್ರವಿ ಪ್ರಾಣಿಗಳ ಹತೋಟಿ ಆಗದೆ ಇದ್ದ ಪಕ್ಷದಲ್ಲಿ ಬೆಳೆಗಳಿಗೆ ಅಪಾರ ನಷ್ಟವಾಗುವದು.

(ಬ) ಆಹಾರದಂತೆ ಉಪಯೋಗ

ಚೈನಾ ಮತ್ತು ಬರ್ಮಾದೇಶಗಳಲ್ಲಿ ಹೆಬ್ಬಾವುಗಳನ್ನು ಆಹಾರದಂತೆ ಉಪಯೋಗಿಸುತ್ತಾರೆ. ವ್ಹಿಟಕರ್ (whitakar)

ಪುಸ್ತಕದಲ್ಲಿ ವರದಿಯಾಗಿರುವಂತೆ ಕೇರಳ ಮತ್ತು ತಮಿಳ ನಾಡಿನ ಪೊಲಿಯಾರ ಮತ್ತು ಇನ್ನುಳಿದ ಕಾಡು ಜನರು ದಾಸರಹಾವಿನ ಮಾಂಸವನ್ನು ತಿನ್ನುತ್ತಾರೆ. ಅಲ್ಲದೆ ಬರ್ಮಾ ಮತ್ತು ಭಾರತದ ಕಾಡು ಜನರು ಕೇರೆಹಾವುಗಳನ್ನು ತಿನ್ನುತ್ತಾರೆ. (ಇವೆಲ್ಲಾ ಹಾವುಗಳು ವಿಷರಹಿತ ಆಗಿವೆ). ಅಮೇರಿಕಾ ಮತ್ತು ಕೆಲವು ಪಶ್ಚಿಮ ದೇಶದ ಫಲಹಾರ ಮಂದಿರಗಳಲ್ಲಿ ಹೆಬ್ಬಾವಿನ ಮಾಂಸದ ತುಂಡುಗಳನ್ನು ವಿಶೇಷ ರುಚಿಗಾಗಿ ಪೂರೈಸುವದೂ ಉಂಟು.

ವಿಷಸರ್ಪಗಳು ಎಷ್ಟು ವಿಷಕಾರಿಗಳೋ ಅಷ್ಟೇ ಅವುಗಳ ಮಾಂಸ ಲಾಭದಾಯಕ. ಹಾಂಗಕಾಂಗ (Hong–Kong)ದಲ್ಲಿ ಚಳಿ ಹೆಚ್ಚಾದಂತೆಲ್ಲಾ ಸರ್ಪಗಳು ಹೆಚ್ಚು ಖರ್ಚಾಗುತ್ತವೆ. ಸರ್ಪದ ಮಾಂಸದ ಪ್ರತಿ ಪೌಂಡು ೧½ ಡಾಲರದಿಂದ ೩ ಡಾಲರಗಳ ವರೆಗೆ ಮಾರಾಟವಾಗುತ್ತದೆ. ಈ ಮಾಂಸ ಫಲಹಾರಮಂದಿರಗಳಲ್ಲಿ ದೊರೆಯುತ್ತದೆ. ಗಿರಾಕಿಗಳು ಬಂದಾಗ ಅಂಗಡಿಯವನು ಅವರ ಸಮ್ಮುಖದಲ್ಲಿಯೇ ಚೀಲದಿಂದ ಸರ್ಪವನ್ನು ಹೊರತೆಗೆದು ಅದರ ತಲೆಯನ್ನು ಕತ್ತರಿಸಿ ಉಳಿದ ಭಾಗದಿಂದ ಚರ್ಮವನ್ನು ಸುಲಿದು (ಬಾಳೆಹಣ್ಣು ಸುಲಿದಂತೆ), ತುಂಡು ತುಂಡಾಗಿ ಕತ್ತರಿಸಿ ಅದಕ್ಕೆ ಮಸಾಲೆ ಬೆರೆಸಿ ಮಾರಾಟ ಮಾಡುತ್ತಾನೆ.

ಮಧ್ಯಪ್ರದೇಶ ಮತ್ತು ನೇಫಾದಲ್ಲಿ ರ್‍ಯಾಟಲ್ ಹಾವಿನ (ಇದೊಂದು ವಿಷಸರ್ಪ) ಮಾಂಸವನ್ನು ಸ್ವಾದಿಸುತ್ತಾರೆ. ಕಡಲ ಹಾವುಗಳನ್ನು ಕೂಡ ಜಪಾನದವರು ತಿನ್ನುತ್ತಾರೆ. ವಿಷಪೂರಿತ ಹಾವಿನ ಮಾಂಸವು ಮನುಷ್ಯರ ಲೈಂಗಿಕ ಸಾಮರ್ಥ್ಯ ಹೆಚ್ಚಿಸುವುದೆ?

ಸಿಗಾಟಕ್ಕೆ ಸಮೀಪದ ಟಿಕೆಯೂನಾಗಿಯೂ ಪ್ರದೇಶದ ಹೋಟೆ ಲೊಂದರ ಪ್ರಕಾರ ಹೌದು. ಈ ಹೋಟೆಲು ಲೈಂಗಿಕ ಸಾಮರ್ಥ್ಯ ಹೆಚ್ಚಿಸುವ ವಿಷಪೂರಿತ ಹಾವಿನ ಮಾಂಸದ ತಿಂಡಿಗಳನ್ನು ತಯಾರಿಸಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಈ ಪ್ರದೇಶದಲ್ಲಿ ಕಾಣುವ ನಾಮೂಷಿ ಎಂಬ ಹಾವಿನ ಮಾಂಸದಿಂದ ಕಾಮಾಸಕ್ತಿ ಮತ್ತು ಸಾಮರ್ಥ್ಯ ಹೆಚ್ಚುವದೆಂದು ಹಳೆಯ ನಂಬಿಕೆ. ಹೋಟೆಲು ಈ ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು ಗಿರಾಕಿಗಳನ್ನು ಆಕರ್ಷಿಸುತ್ತದೆ. ತಿಂಡಿಗಳಲ್ಲಿ ನಾಮೂಷಿ ಹಾವಿನ ಮಾಂಸ ಹೆಚ್ಚಾಗಿರಬಾರದು. ಹೆಚ್ಚಾಗಿದ್ದಲ್ಲಿ ಅದನ್ನು ತಿಂದವರು ಕಾಮೋನ್ಮತ್ತರಾಗಬಹುದೆಂದು ಪೌರಸಭೆ ಅಧಿಕಾರಿಗಳು ತಿಳಿಸಿ ದ್ದಾರೆ. ನಾಮೂಷಿಮಾಂಸದಿಂದ ತಯಾರಿಸಿದ ತಿಂಡಿಗೆ ಎರಡು ಸಾವಿರ ಯನ್ ಅಂದರೆ ಸುಮಾರು ಹತ್ತು ಡಾಲರು ತೆರಬೇಕಾ ಗುವುದು. ಇದರ ಪರಿಣಾಮವಾಗಿ ಲಭಿಸುವ ರತಿವಿಜಯಕ್ಕೆ ಹೋಲಿಸಿದಲ್ಲಿ ಬೆಲೆ ಹೆಚ್ಚೇನಲ್ಲ ಅನ್ನುತ್ತಾರೆ ಅಧಿಕಾರಿಗಳು.

"ಹಾವು ತಿಂದು ಲೈಂಗಿಕ ಸಾಮರ್ಥ್ಯ ಬೆಳೆಸಿಕೊಳ್ಳಿ" ಎಂದು ಅನ್ನಬಹುದೇ? ಹ್ಯಾಂಬರ್ಗರ್–ಮಾಂಸದ ಒಂದು ತಿನಿಸನ್ನು ಈಗ ಜಪಾನಿನಲ್ಲಿ ವಿಷಕಾರಿ ಹಾವುಗಳಿಂದ ಸಿದ್ಧಪಡಿಸ ಲಾಗುತ್ತಿದೆ. ಆ ಹ್ಯಾಂಬರ್ಗರ್‌ನ್ನು ತಿಂದರೆ ಲೈಂಗಿಕ ಶಕ್ತಿ ಹೆಚ್ಚು ವುದೆಂದು ಹೇಳಲಾಗುತ್ತಿದೆ. ಬಿಸಿನೀರಿನ ಕಾರಂಜಿ ಇರುವ ಆ ಗ್ರಾಮೀಣ ವಿಹಾರ ಕೇಂದ್ರದ ಸಮೀಪದಲ್ಲಿ ನಾಮೂಷಿ (ಮಾಮೂಸಿ) ಹಾವುಗಳು ಹೇರಳವಾಗಿವೆ. ಅವುಗಳಲ್ಲಿ ಲೈಂಗಿಕ

ಶಕ್ತಿ ತುಂಬಿದೆ ಎಂದು ಜಪಾನಿಯರ ಭಾವನೆ. ಆದರೆ ಆ ನಗರದ ಅಧಿಕಾರಿಗಳು ಹ್ಯಾಂಬರ್ಗರ್‌ಗಳಲ್ಲಿ ನಾಮೂಸಿ ಹಾವಿನ ಮಾಂಸ ಹೆಚ್ಚಿಗೆ ಇರಬಾರದೆಂದು ಆಜ್ಞೆ ಮಾಡಿದ್ದಾರೆ. ಯಾಕಂದರೆ ಹೆಚ್ಚು ತಿಂದ ಗಿರಾಕಿಗಳು ಲೈಂಗಿಕ ಅಪರಾಧವೆಸಗಲು ಮುಂದಾಗ ಬಹುದೆಂದು ಅವರು ಹೆದರಿದ್ದಾರೆ. ನಾಮೂಷಿ ಹ್ಯಾಂಬರ್ಗರ್ ಗಳನ್ನು ಕಾಯಿಪಲ್ಲೆಗಳೊಂದಿಗೆ ಬಡಿಸುತ್ತಾರೆ. ಒಂದಕ್ಕೆ ಅಂದರೆ ಮಾಂಸದಿಂದ ತಯಾರಿಸಿದ ತಿಂಡಿಗೆ ಸುಮಾರು ೧೪೦ ರೂಪಾಯಿ ಗಳು.

ಪೌರ್ವಾತ್ಯ ರಷ್ಟ್ರಗಳಲ್ಲಿ ವಿಶೇಷವಾಗಿ ಕೋರಿಯಾದಲ್ಲಿ ಹಾವನ್ನು ಆಹಾರವಾಗಿ ಸಾರಿನಂತೆ ಸೇವಿಸುತ್ತಾರೆ ಹಾವಿನಿಂದ ಮದ್ಯವನ್ನೂ ತಯಾರಿಸುತ್ತಿದ್ದು ಕೋರಿಯನ್‌ರಿಗೆ ಅದು ತುಂಬಾ ಜನಪ್ರಿಯ ಪೇಯವಾಗಿದೆ.

(ಕೆ) ಚರ್ಮದ ಮಹತ್ವ

ಸರ್ಪಗಳ ಚರ್ಮದಿಂದ ಅದರಲ್ಲಿಯೂ ಮುಖ್ಯವಾಗಿ ಹೆಬ್ಬಾವು (Python), ಬಳೆವಡಕ (Russell's viper), ನಾಗರ ಹಾವು (Cobra), ಮತ್ತು ಕೇರೆಹಾವು (Ratsnake), ಮುಂತಾ ದವುಗಳ ಚರ್ಮದಿಂದ ಅನೇಕ ಆಕರ್ಷಕ ವಸ್ತುಗಳು ತಯಾರಾಗು ತ್ತವೆ. ಅವೆಂದರೆ ನಡಪಟ್ಟಿ (Belt), ಸಂಚಿ (wallet), ಹಣದ ಚೀಲ (Purse), ಕೈಚೀಲ (Hand bag), ಬಾಚಣಿಕೆ ಇಡುವ ಪೆಟ್ಟಿಗೆ (Comb box), ಸಿಗರೇಟ್ ಪೆಟ್ಟಿಗೆ (Cigarette box), ತಂಬಾಕು ಚೀಲ (Tobacco bag), ಕ್ರೀಡಾ ಪಟುಗಳು ಧರಿ ಸುವ ಜಾಕೀಟು, ಟೊಪ್ಪಿಗೆ, ಕೊರಳಪಟ್ಟಿ (Scarf), ಕೊರಳ

ಲಂಗೋಟಿ (Necktie), ಚಪ್ಪಲಿಗಳು, ಬೂಟುಗಳು, ದೀಪದ ಮುಚ್ಚಳ (Lamp Shade),ಪುಸ್ತಕ ಹೊದಿಕೆ (Book Cover,) ಚಾಕು ಚೀಲ (Knief box), ಮುಂತಾದವುಗಳು. ಬ್ರಾಝಿಲ್ ದೇಶದಲ್ಲಿ ಗ್ರಂಥಾಲಯಗಳ ಹೊತ್ತಿಗೆಗಳನ್ನು ಸರ್ಪಗಳ ಚರ್ಮ ದಿಂದ ಬೈಂಡಿಂಗ್ (Binding) ಮಾಡುತ್ತಾರೆ. ಈ ಪೊತ್ತಿಗೆಗಳು ಹಾವಿನ ಚರ್ಮದಿಂದ ಆವರಿಸಲ್ಪಟ್ಟಿದ್ದು ಬಹು ಸುಂದರವಾಗಿ ಕಾಣಿಸುತ್ತವೆ. ಹೆರಿಗೆ ತೊಂದರೆಯನ್ನು ಅನುಭವಿಸುತ್ತಿರುವಾಗ ಹಾವಿನ ಚರ್ಮದ ಪಟ್ಟಿಯನ್ನು ಗರ್ಭವತಿಯ ನಡುವಿನ ಸುತ್ತಲೂ ಬಿಗಿದರೆ ಸುಲಭವಾಗಿ ಹೆರಿಗೆ ಆಗುವದೆಂದು ಯುರೋಪಿನಲ್ಲಿ ನಡೆಸಿದ ಪ್ರಯೋಗದಿಂದ ತಿಳಿದಿದೆ. ಉತ್ತರ ಅಮೇರಿಕೆಯಲ್ಲಿ ರ್‍ಯಾಟಲ್ ಹಾವಿನ (Rattle Snake) ಚರ್ಮ ವನ್ನು ಒಣಗಿಸಿ ಪುಡಿಮಾಡಿ ಆ ಪುಡಿಯನ್ನು ಗರ್ಭಪಾತಕ್ಕೂ ಪ್ರಯೋಗಿಸಿದ್ದಾರೆ,

ಭಾರತದಲ್ಲಿ ಎಪ್ರಿಲ್ ೧೯೬೭ರಿಂದ ಮಾರ್ಚ ೧೯೬೮ರ ವರೆಗೆ, ಅಂದರೆ ಒಂದು ವರ್ಷದ ಅವಧಿಯಲ್ಲಿ ಚರ್ಮದ ಉದ್ದಿಮೆಯಿಂದ ಸುಮಾರು ೩೫೮, ೪೧೩ ಕಿಲೋದಷ್ಟು ಚರ್ಮವನ್ನು ಮಾರಾಟ ಮಾಡಿ ೧೦೭,೬೫೨, ೮೮೯ ರೂಪಾಯಿಗಳನ್ನು ಸಂಪಾದಿಸಲಾಗಿದೆ. ಪ್ರತಿಯೊಂದು ಚರ್ಮಕ್ಕೆ ಸಾಕಷ್ಟು ಬೆಲೆ ಇರುವದು ಕಂಡು ಬಂದಿದೆ. ಈ ಚರ್ಮದ ಉದ್ದಿಮೆಗಾಗಿ ಮುಖ್ಯವಾಗಿ. ಕೇರೆ ಹಾವು. ನಾಗರಹಾವು ಮತ್ತು ಹೆಬ್ಬಾವುಗಳನ್ನು ಬಳಸಲಾಗುತ್ತಿದೆ.

ಚರ್ಮದ ಉದ್ದಿಮೆಯು ಕಲಕತ್ತಾದಲ್ಲಿ ಅತಿ ಭರದಿಂದ ಸಾಗಿದೆ. ಹೆಬ್ಬಾವುಗಳ ಚರ್ಮವನ್ನು ಸುಲಿಯುವ ವಿಧಾನವನ್ನು

೧೯೭೭ನೆಯ ನವಂಬರ ತಿಂಗಳ ಮೊದಲನೆಯ ವಾರದ "ಇಲಸ್ಟ್ರೇಟೇಡ್ ವೀಕ್ಲಿ ಆಫ್ ಇಂಡಿಯಾ"(Illustrated weekly of India) ಪತ್ರಿಕೆಯಲ್ಲಿ ಕೊಡಲಾಗಿದೆ. ಹೆಬ್ಬಾವಿನ ಪ್ರತಿಯೊಂದು ಅಡಿ ಚರ್ಮದ ಬೆಲೆ ೨೨ ರೂ. ಎಂದು ಇದೇ ಪತ್ರಿಕೆಯಲ್ಲಿ ಉಲ್ಲೇಖವಿದೆ. ಹಾವಿನ ಚರ್ಮದ ಉದ್ಯಮವು ನಮಗೆ ಹಣ ಹಾಗೂ ವಿವಿಧ ಬಗೆಯ ವಸ್ತುಗಳನ್ನೇನೋ ಒದಗಿಸಿದೆ. ಆದರೆ ಈ ಉದ್ಯಮಕ್ಕಾಗಿ ಹಾವುಗಳನ್ನು ಕೊಲ್ಲುವದರಿಂದ ನಮಗೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಹಾನಿಗಳು ಆಗುತ್ತವೆ.

(ಡ) ಔಷಧಿಯಂತೆ ಕೊಬ್ಬಿನ ಬಳಕೆ

ಮಂಡಲದ ಹಾವಿನ ಎಣ್ಣೆಯ ಬಳಕೆಯು ಪುರಾತನ ಕಾಲದಿಂದಲೂ ಪ್ರಚಾರದಲ್ಲಿದೆ. ಈ ಹಾವಿನ ಎಣ್ಣೆಯನ್ನು ಉಪಯೋಗಿಸಿದವರಲ್ಲಿ ಭಾರತೀಯರೇ ಮೊದಲಿಗರು. ನಂತರ ಯುರೋಪ ದೇಶದವರು, ಇದರ ಮಹತ್ವವನ್ನು ಅರಿತುಕೊಂಡರು. ಕೊಬ್ಬಿನಿಂದ ತಯಾರಾಗುವ ಎಣ್ಣೆಯನ್ನು ಕೈ, ಕಾಲುಗಳ ಗಂಟಿಗೆ ಊತಕ್ಕೆ, ಅಲ್ಲದೆ ಉಳುಕಿಗೆ ಸರ್ವೇಸಾಮಾನ್ಯವಾಗಿ ಉಪಯೋಗಿಸಲಾಗುತ್ತಿದೆ. ಎಣ್ಣೆಯನ್ನು ಚೆನ್ನಾಗಿ ಉಜ್ಜಲು ಪ್ರೋತ್ಸಾಹದಾಯಕ ಪರಿಣಾಮಗಳು ಕಂಡುಬಂದಿವೆಯಂತೆ. ಎತ್ತುಗಳ ಹೆಗಲು ಬಾವುಗಳಿಗೂ ಎಣ್ಣೆ ಬಳಕೆಯು ಅನುಕೂಲವಾಗಬಹುದು ಉಡದ ನೆಣದಂತೆಯೇ ಹಾವಿನ ನೆಣವನ್ನು ಅನೇಕ ಸಂದರ್ಭದಲ್ಲಿ ಬಳಸಿಕೊಳ್ಳಬಹುದು. ಕೇರೆಹಾವಿನ ನೆಣವನ್ನು ಕುಷ್ಟರೋಗ ಗುಣಪಡಿಸಲು ಬಳಸಲಾಗುತ್ತಿದೆ.

(ಇ) ರಕ್ತದ ಪ್ರಯೋಜನ


ಯುನಾನಿ ವೈದ್ಯರು ಹಾವಿನ ರಕ್ತವನ್ನು ತೊನ್ನು ರೋಗ ಗುಣಪಡಿಸಲು ಸಿಫಾರಸು ಮಾಡುತ್ತಾರೆ. ರಕ್ತವನ್ನು ತುಟಿಗೆ ಸವರಲು ನೈಸರ್ಗಿಕವಾದ ಸುಂದರ ಬಣ್ಣ ಬರುವದೆಂಬ ನಂಬಿಕೆ ಯೂ ಇದೆ.

(ಈ) ಔಷಧಿಗಳ ತಯಾರಿಕೆ

ಭಾರತದಲ್ಲಿ ಪ್ರಮುಖವಾಗಿ ನಾಲ್ಕು ನಮೂನೆಯ ವಿಷಸರ್ಪ ಗಳಿವೆ. ಈ ವಿಷಸರ್ಪಗಳ ಪರಿಚಯವನ್ನು ಮುಂದೆ ಮಾಡಲಾಗಿದೆ. ಹಾವುಗಳ ವಿಷವನ್ನು ಮುಖ್ಯವಾಗಿ ಪ್ರತಿವಿಷ (Antivenene) ಚುಚ್ಚುಮದ್ದನ್ನು ತಯಾರಿಸಲು ಬಳಸಲಾಗುತ್ತದೆ. ವಿಷ ಸಂಗ್ರಹಿ ಸುವ ಮತ್ತು ಅದರ ಚುಚ್ಚುಮದ್ದನ್ನು ಕುದುರೆಗೆ ಕೊಟ್ಟು ಪ್ರತಿ ವಿಷದ ಚುಚ್ಚುಮದ್ದನ್ನು ತಯಾರಿಸುವ ಕಾರ್ಯವು ಮುಂಬಯಿ ಯಲ್ಲಿರುವ ಹಾಫ್‌ಕಿನ್ಸ(Hoffkint)ಸರ್ಪಾಗಾರ ಮತ್ತು ಕಾಸಾಳಿ (Kasauli) ಕೇಂದ್ರೀಯ ಸಂಶೋಧನಾಲಯದಲ್ಲಿ ನಡೆದಿದೆ.

ಹಾವು ತಜ್ಞರು (Herpitologists) ಈ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ವಿಷಹಿಂಡುವ ಸಮಯದಲ್ಲಿ ಒಂದು ಕಾಜಿನ ಪಾತ್ರೆಯನ್ನು ತೆಗೆದುಕೊಂಡು ಅದರ ಬಾಯಿಗೆ ರಬ್ಬರಿನ ಇಲ್ಲವೆ ಪ್ಲಾಸ್ಟಿಕ್ ಅರಿವೆಯ ಮುಚ್ಚಳವನ್ನು ಮುಚ್ಚುತ್ತಾರೆ. ವಿಷವನ್ನು ಪಡೆಯಬೇಕಾದಾಗ ಒಂದು ವಿಷಸರ್ಪ (ಉದಾ: ನಾಗರ ಹಾವು)ವನ್ನು ತೆಗೆದುಕೊಂಡು ಬಂದು ಮುಚ್ಚಳವನ್ನು


ಕಚ್ಚಲು ಪ್ರಚೋದಿಸುತ್ತಾರೆ. ಹಾವು ಮುಚ್ಚಳವನ್ನು ಕಚ್ಚುವದ
ರಿಂದ ಪಾತ್ರೆಯಲ್ಲಿ ವಿಷ ಸಂಗ್ರಹವಾಗುತ್ತದೆ.



ಚಿತ್ರ ೨. ವಿಷಹಿಂಡುವದನ್ನು ತೋರಿಸುವದು

ಎರಡನೆಯ ವಿಧಾನದಲ್ಲಿ ಅಂದರೆ ಹಾವಿನ ವಿಷದಂತ
ಗಳು ದೊಡ್ಡವಿದ್ದರೆ ಒಂದು ಅಗಲವಾದ ಕಾಜಿನ ಪಾತ್ರೆ
ಯನ್ನು ತೆಗೆದುಕೊಂಡು ಸರಪಳಿಮಂಡಲದ ಹಾವನ್ನು
ಬಾಯಿ ತೆರೆಯುವಂತೆಮಾಡಿ ನೇರವಾಗಿ ವಿಷವು ಪಾತ್ರೆಯಲ್ಲಿ
ಬೀಳುವಂತೆ ಮಾಡುತ್ತಾರೆ. ಹೀಗೆ ಮಾಡುವಾಗ ಹಾವು ಬಾಯಿ

ತೆರೆದೊಡನೆಯೇ ವಿಷಗ್ರಂಥಿಗಳನ್ನು ಇಕ್ಕಳದಿಂದ ಒತ್ತು ತ್ತಾರೆ. ವಿಷವು ಗ್ರಂಥಿಗಳಿಂದ ಹೊರಟು ಕಾಲುವೆಗಳ ಮುಖಾಂತರ ವಿಷದಂತದಲ್ಲಿ ಸಾಗಿ ಪಾತ್ರೆಯಲ್ಲಿ ಬೀಳುತ್ತದೆ. ವಿಷವನ್ನು ಪಾತ್ರೆಯಲ್ಲಿ ಸಂಗ್ರಹಿಸಿಕೊಂಡ ನಂತರ ಗಾಳಿಗೆ ತೆರೆದಿಡ



ಚಿತ್ರ೩. ವಿಷ ಹಿಂಡುವದನ್ನು ತೋರಿಸುವದು

ಲಾಗಿ ಅದು ಗಟ್ಟಿಯಾಗುತ್ತದೆ. ಈಗ ಇದು ಪುಡಿ ರೂಪವನ್ನು ಹೊಂದುತ್ತದೆ. ಪುಡಿಯ ರೂಪದಲ್ಲಿಯ ವಿಷವನ್ನು ಕಾಪಾಳಿ

(Kasauli) ಕೇಂದ್ರೀಯ ಸಂಶೋಧನಾಲಯಕ್ಕೆ ಕಳಿಸಿಕೊಡುತ್ತಾರೆ.

ಪುಡಿಯ ರೂಪದಲ್ಲಿರುವ ವಿಷಯುವನ್ನು ಮತ್ತೆ ಕರಗಿಸಿ, ಕುದುರೆಗೆ ಸಣ್ಣ ಪ್ರಮಾಣದಲ್ಲಿ ಚುಚ್ಚುಮದ್ದನ್ನಾಗಿ ಕೊಡುವರು. ವಿಷದ ಪ್ರಮಾಣವು ಕುದುರೆಯ ರಕ್ತದಲ್ಲಿ ಸೇರಿದೊಡನೆಯೇ ಪ್ರತಿಶರೀರಗಳು(Antibodies)ಕುದುರೆಯ ರಕ್ತದಲ್ಲಿ ತಯಾರಾಗುವವು ವಿಷದ ಪ್ರಮಾಣವನ್ನು ದಿನದಿಂದ ದಿನಕ್ಕೆ, ವಾರದಿಂದ ವಾರಕ್ಕೆ ಹೆಚ್ಚಿಸುತ್ತ ಹೋಗುವರು. ಕೊನೆಯದಾಗಿ ಕುದುರೆಯ ರಕ್ತದಲ್ಲಿ ಸಾಕಷ್ಟು ಪ್ರತಿಶರೀರಗಳು ತಯಾರಾಗಿ, ಕುದುರೆಯು ಸಾಕಷ್ಟು ವಿಷವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದುವದು. ಅಂದರೆ ಅದಕ್ಕೆ ಯಾವ ವಿಷದ ಹಾವು ಕಚ್ಚಿದರೂ ಏನೂ ಪರಿಣಾಮವಾಗುವದಿಲ್ಲ. ಈ ಕುದುರೆಯ ರಕ್ತವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಒಂದು ಪಾತ್ರೆಯಲ್ಲಿ ತೆಗೆದುಕೊಳ್ಳುವರು. ರಕ್ತವು ಹೆಪ್ಪುಗಟ್ಟಿಲಾಗಿ ಗಟ್ಟಿಯಾದ ಪದಾರ್ಥವನ್ನು ತೆಗೆದೊಗೆದು ತಿಳಿಹಳದಿ ಬಣ್ಣದ ಲಸಿಕೆಯನ್ನು ಸಂಗ್ರಹಿಸಿಕೊಳ್ಳುವರು. ಈ ತಿಳಿಹಳದಿ ಬಣ್ಣದ ದ್ರವವೇ ವಿಷನಿರೋಧಕ ಸೂಕ್ಷ್ಮಶರೀರಗಳನ್ನು ಹೊಂದಿರುತ್ತದೆ. ಈ ಲಸಿಕೆಯನ್ನು ಮತ್ತೆ ಗಟ್ಟಿಮಾಡಿ ಪುಡಿಯ ರೂಪದಲ್ಲಿ ಇಡುವರು. ಇದಕ್ಕೆ ಆ್ಯಂಟಿವ್ಹೆನಿನ್ ಇಲ್ಲವೆ ಪ್ರತಿವಿಷವೆಂದು ಕರೆಯುವರು. ಯಾರಿಗಾದರೂ ವಿಷಸರ್ಪ ಕಚ್ಚಿದಾಗ ಪ್ರತಿವಿಷದ ಪುಡಿಯನ್ನು ಭಟ್ಟಿ ಇಳಿಸಿದ ನೀರಿ (Distiled water)ನಲ್ಲಿ ಕರಗಿಸಿ ವಿಷನಿರೋಧಕ ಚುಚ್ಚು ಮದ್ದನ್ನಾಗಿ ಕೊಡುವರು. ಆ್ಯಂಟಿವ್ಹೆನಿನ್ ಪ್ರತಿಯೊಂದು ದೊಡ್ಡ ಆಸ್ಪತ್ರೆಯಲ್ಲಿ ಸಿಗುವದು. ಇತ್ತೀಚೆಗೆ ಎಲ್ಲಾ ವಿಷಸರ್ಪಗಳ ವಿಷದ ವಿರುದ್ಧ ಒಂದು ಸರ್ವೇ

ಸಾಮಾನ್ಯವಾದ ಲಸಿಕೆಯನ್ನು ತಯಾರಿಸಲಾಗಿದೆ. ಅದಕ್ಕೆ ಪೊಲಿವೆಲೆಂಟ ಸ್ನೇಕ್ಸ ಆ್ಯಂಟಿವ್ಹೆನಿನ (Polyvalent snakes antivenene) ಎಂದು ಕರೆಯುತ್ತಾರೆ. ಮೆಕ್ಸಿಕೊ(Mexico)ರೆಡ್ ಇಂಡಿಯನ್ನರು ರ್‍ಯಾಟಲ್‌ಮಂಡಲದ ಹಾವುಗಳಿಂದ ಮುದ್ದಾಂ ಕಡಿಸಿಕೊಳ್ಳುತ್ತಾರೆ. ಹೀಗೆ ವಿಷಸರ್ಪದಿಂದ ಕಡಿಸಿಕೊಳ್ಳುವಾಗ ಅವರು ಎಚ್ಚರಿಕೆ ವಹಿಸುವದೇನಂದರೆ, ಪ್ರಾರಂಭದಲ್ಲಿ ವಿಷವು ಅತಿ ಸ್ವಲ್ಪ ಪ್ರಮಾಣದಲ್ಲಿ ರಕ್ತದಲ್ಲಿ ಸೇರಬೇಕು. ಈ ಪ್ರಮಾಣದಲ್ಲಿ ಸೇರಿಸಿಕೊಳ್ಳುತ್ತಾ ಕೊನೆಯದಾಗಿ ವಿಷವನ್ನು ತಮ್ಮ ರಕ್ತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸೇರಿಸಿಕೊಳ್ಳುತ್ತಾರೆ. ಈ ವಿಧಾನದಿಂದ ಇವರ ರಕ್ತದಲ್ಲಿಯೂ ಕೂಡ ವಿಷದ ವಿರುದ್ಧ ಹೋರಾಡುವ ಪ್ರತಿಶರೀರಗಳು (Antibodies) ತಯಾರಾಗುತ್ತವೆ. ಇಂಥವರಿಗೆ ವಿಷಸರ್ಪಗಳ ಅಂಜಿಕೆ ಕಿಂಚಿತ್ತು ಇರುವದಿಲ್ಲ.

ಜಗತ್ತಿನಲ್ಲಿಯೇ ಅತ್ಯಂತ ವಿಷಕಾರಿಯಾದ ಹಾವಿನಿಂದ ಕಚ್ಚಲ್ಪಟ್ಟರೂ ವಿಲಿಯಂ ಹಾಸ್ಟ (William Haast) ಆಸ್ಪತ್ರೆಗೆ ಹೋಗಲಿಲ್ಲವಂತೆ. ಆವನಿಗೆ ಗಂಟಲು ಕೆರೆದಂತಾಗಿ ದೇಹಕ್ಕೆಲ್ಲ ನೋವು ಬಂತು ಅಷ್ಟೆ.

೬೭ ವರ್ಷದ ಈ ಹಾವು ತಜ್ಞರು ಇತ್ತೀಚಿಗೆ ಒಂದು ದಿನ ಸರ್ಪಾಗಾರದಲ್ಲಿ ಹಾವಿನ ವಿಷ ಕರೆಯುತ್ತಿದ್ದಾಗ ಹಾವು ಕಚ್ಚಿತು. ಹಾವು ಕಚ್ಚಿದಾಗ ಮೂವತ್ತು ನಿಮಿಷಗಳಲ್ಲಿಯೇ ವಿಷನಿರೋಧಕ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕು. ಇಲ್ಲದಿದ್ದರೆ ಹಾವು ಕಚ್ಚಿದವನು ಬದುಕುವದು ಕಷ್ಟ. ಆದರೆ ಹಾಸ್ಟನಿಗೆ

ಇಲ್ಲಿಯುವರೆಗೆ ವಿಷದ ಹಾವುಗಳು ೧೩೦ ಸಲ ಕಚ್ಚಿವೆ. ಕಾಳಿಂಗ ನಾಗರಗಳು ಎರಡು ಸಾರೆ ಕಚ್ಚಿವೆ– ೧೯೬೫ರಲ್ಲಿ ಒಮ್ಮೆ ೧೯೬೭ ರಲ್ಲಿ ಮತ್ತೊಮ್ಮೆ. ಅವನು ಪ್ರತಿ ತಿಂಗಳು ಹಾವಿನ ವಿಷ ನಿರೋಧಕ ಚುಚ್ಚುಮದ್ದನ್ನು ತೆಗೆದುಕೊಳ್ಳುತ್ತಾನೆ. ಅವನ ರಕ್ತವು ಹಾವು ಕಚ್ಚಿಸಿಕೊಂಡ ೨೦ ಜನರನ್ನು ಬದುಕಿಸಿದೆ. ಅವನ ಸರ್ಪಾಗಾರವು ಫ್ಲೋರಿಡಾದ ಮಿಯಾಮಿ (Miami)ಯಾದ ದಕ್ಷಿಣಕ್ಕೆ ೧೩ ಮೈಲುಗಳ ದೂರದಲ್ಲಿದೆ. ಅವನು ವಿಷದ ವ್ಯಾಪಾರವನ್ನೆ ಮಾಡಿ ಹೊಟ್ಟೆಹೊರೆದುಕೊಳ್ಳುವನಲ್ಲದೆ ಅವನಿಗೆ ಸಾಕಷ್ಟು ಗಳಿಕೆಯೂ ಆಗುತ್ತದೆ. ಅವನ ಜೊತೆಗೆ ೧೨ ಮಂದಿ ಸಹಾಯಕ ಸಿಬ್ಬಂದಿ ಯುವರೂ ಕೆಲಸ ಮಾಡುತ್ತಾರೆ. ಅವನ ವಿಷಯುವಾಗಿ ಹೆಚ್ಚಿನ ಮಾಹಿತಿ ೧೯೭೦ ಫೆಬ್ರುವರಿಯು ಸ್ಪ್ಯಾನ್ (span 1970 February 'A' venomous vocation) ಪತ್ರಿಕೆಯು ಲೇಖದಲ್ಲಿದೆ.

ಹಾವಿನ ವಿಷ ಹೃದಯು ಸ್ಥಂಭನಕ್ಕೆ ರಾಮುಬಾಣವೆಂದು ಇತ್ತೀಚಿನ ಸಂಶೋಧನೆಗಳಿಂದ ಸಿದ್ಧವಾಗಿದೆ. ಹೊಸ ದಿಲ್ಲಿಯು ಲೇಡಿ ಹಾರ್ಡಿಂಜ ವೈದ್ಯಕೀಯು ಕಾಲೇಜಿನ ಸಂಶೋಧನಾ ತಂಡ ಈ ಅಪರೂಪದ ಸಂಶೋಧನೆಯುನ್ನು ಪ್ರಕಟಿಸಿದೆ. ಇಲಿಗಳ ಮೇಲೆ ನಾಗರ ಹಾವಿನ ವಿಷವನ್ನು ಪ್ರತ್ಯೇಕ ಮಾತ್ರೆಯು ರೂಪದಲ್ಲಿ ಪ್ರಯೋಗಿಸಿದಾಗ ಉತ್ತಮು ಪ್ರತಿಕ್ರಿಯೆ ಕಂಡು ಬಂದಿದೆ. ಆರು ಜನ ಸದಸ್ಯರಿರುವ ಸಂಶೋಧನಾ ತಂಡವು ಈ ಅಂಶವನ್ನು ಸ್ಪಷ್ಟ ಪಡಿಸಿತಲ್ಲದೆ, ಹೃದಯಾಘಾತವಾದ ಇಲಿಗಳ ಮೇಲೆ ಹಾವಿನ ಪ್ರತಿವಿಷ ಪ್ರಭುತ್ವ ಸಾಧಿಸಿತೆಂದೂ ಪ್ರಕಟಿಸಿತು. ಹೃದಯು ರೋಗ ತಗುಲಿದ ಮನುಷ್ಯರಿಗೆ ಸಾಮಾನ್ಯವಾಗಿ ಉಪಯೋಗಿಸ

ಲಾಗುತ್ತಿರುವ ಡಿಜಿಟಾಲ್‌ವನ್ನು ಹೃದ್ರೋಗ ತಗುಲಿದ ಇಲಿಗಳ ಮೇಲೆ ಪ್ರಯೋಗಿಸಿದಾಗ ಯಾವುದೇ ಪರಿಣಾಮ ಕಂಡು ಬರಲಿಲ್ಲ. ನಾಗರ ಹಾವಿನ ವಿಷದಿಂದ ವ್ಯಕ್ತಪಟ್ಟ ಪರಿಣಾಮವನ್ನು ಗಮನಿಸಿದರೆ, ಡಿಜಿಟಲ್ ಔಷಧಿ ನಾಟದ ಮನುಷ್ಯನಿಗೂ ಇದನ್ನು ಪ್ರಯೋಗಿಸಬಹುದೆಂಬ ಭರವಸೆ ಮೂಡಿದೆ ಎಂದು ಅವರು ಹೇಳಿದರು. ಆದಾಗ್ಯೂ ಶ್ರೀವಾತ್ಸವ ಅವರು ಎಚ್ಚರಿಕೆ ನೀಡುತ್ತಾ ಹಾವಿನ ವಿಷವು ಹೃದ್ರೋಗ ತಗುಲಿದ ಮನುಷ್ಯನಿಗೆ ಎಷ್ಟರ ಮಟ್ಟಿಗೆ ಒಗ್ಗುತ್ತದೆ ಎಂಬುದನ್ನು ತಿಳಿಯಲು ಇನ್ನೂ ಹೆಚ್ಚಿನ ಸಂಶೋಧನೆ ಅವಶ್ಯ ಎಂದು ತಿಳಿಸಿದ್ದಾರೆ.

ಹಾವುಗಳ ವಿಷದಿಂದ ಹೋಮಿಯೋಪತಿ ಪದ್ಧತಿಯಲ್ಲಿ ಹೃದ್ರೋಗ ಮತ್ತು ಇತರ ರೋಗಗಳನ್ನು ನಿವಾರಿಸಬಲ್ಲ ಅನೇಕ ಅತ್ಯಮೌಲ್ಯ ಔಷಧಿಗಳನ್ನು ತಯಾರಿಸುತ್ತಾರೆ. ಆಯುರ್ವೇದ ವೈದ್ಯಕೀಯ ಪದ್ಧತಿಯಿಂದ ಸರ್ಪದ ವಿಷದ ಔಷಧಿಗಳನ್ನು ತಯಾರಿಸಿ ಕ್ಷಯರೋಗ ನಿವಾರಣೆಗಾಗಿ ಬಳಸುತ್ತಾರೆ. ನಾಗರ ಹಾವಿನ ವಿಷದ ಚುಚ್ಚುಮದ್ದನ್ನು ಕ್ಯಾನ್ಸರ ರೋಗದ ನಿವಾರಣೆಗಾಗಿ ಪ್ರಯೋಗಿಸುತ್ತಿದ್ದಾರೆ. ಇದರ ಮಹತ್ವವನ್ನು ಅಮೇರಿಕದ ವೈದ್ಯರು ಪ್ರಥಮವಾಗಿ ತೋರಿಸಿಕೊಟ್ಟರು. ಭಾರತದಲ್ಲಿಯೂ ಕೂಡ ಅಲ್ಲಲ್ಲಿ ಪ್ರಯೋಗಗಳು ಮುಂದುವರಿದಿವೆ. ನೋವನ್ನು ಶಮನ ಮಾಡಲು ಮತ್ತು ಸ್ನಾಯುಗಳ ಅಸಮರ್ಥತೆಯನ್ನು ನಿವಾರಿಸಲು ವಿಷದ ಬಳಕೆಯು ರೂಢಿಯಲ್ಲಿದೆ. ಮ್ಯುರಲ್ ಎಂಬ ಒಂದು ತರಹದ ಕುಷ್ಟರೋಗದ ನಿವಾರಣೆಗೆ ನಾಗರ ಹಾವಿನ ವಿಷದ ಚುಚ್ಚುಮದ್ದು ಪರಿಣಾಮಕಾರಿಯಾಗಿ ಕಂಡು

ಬಂದಿವೆ. ನಾಗರಹಾವಿನ ವಿಷದಿಂದ ಸಂಧಿವಾತಕ್ಕೆ ಔಷಧಿ ತಯಾರಿಸುತ್ತಾರೆ.

ಹಾವಿನ ವಿಷದಿಂದ ಮಾತ್ರವಲ್ಲದೆ ಅದರ ಮಾಂಸದಿಂದಲೂ ಔಷಧಿ ಸಿದ್ಧಮಾಡಬಹುದು.


ಟಮೂಲ (Tamool) ಎಂಬ ಒಂದು ವಿಷರಹಿತ ಹಾವಿನ ಮಾಂಸವನ್ನು ಮತ್ತು ಮಲಯೇಶಿಯಾದ ಪಂಬೂ (Pamboo) ಹಾವಿನ ಮಾಂಸವನ್ನು ಒಣಗಿಸಿ ಪುಡಿಮಾಡಿ ಅದನ್ನು ಕುಷ್ಟರೋಗ ನಿವಾರಣೆಗೆ ಉಪಯೋಗಿಸಬಹುದೆಂಬ ನಂಬಿಕೆಯೊಂದಿದೆ. ಉತ್ತರ ಹಿಂದುಸ್ತಾನದ ಕೆಲ ಪ್ರದೇಶಗಳಲ್ಲಿ ಅರದಾಳ ಮತ್ತು ನಾಗಸರ್ಪದ ಮಿಶ್ರಣವನ್ನು ತೊನ್ನುರೋಗ ನಿವಾರಣೆಗೆ ಸಿಫಾರಸು ಮಾಡುತ್ತಾರಂತೆ.

೪. ವಿಷದ ಹಾವುಗಳ ಪರಿಚಯ

ಸುಮಾರು ೨೧೬ ಪ್ರಕಾರದ ಸರ್ಪಗಳಿದ್ದು ಅವುಗಳಲ್ಲಿ ೫೨ ಮಾತ್ರ ವಿಷಪೂರಿತ ಹಾವುಗಳು. ಭಾರತದಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರದ ಹಾವುಗಳು ವಿಷಕಾರಿಗಳಿದ್ದು ಇವು ಮಾನವನಿಗೆ ಅತ್ಯಂತ ಉಪಯುಕ್ತವಾಗಿವೆ.

(ಅ) ವಿಷಗ್ರಂಥಿ ಉಪಕರಣದ ವರ್ಣನೆ

ವಿಷಸರ್ಪದಲ್ಲಿ ಕಣ್ಣಿನ ಹಿಂದೆ ಹಾಗೂ ಸ್ವಲ್ಪ ಕೆಳಗೆ ಎರಡೂ ಬದಿಗೂ ವಿಷಗ್ರಂಥಿಗಳಿರುತ್ತವೆ.



ಚಿತ್ರ ೪, ವಿಷಗ್ರಂಥಿಯ ಉಪಕರಣ: ೧. ವಿಷಗ್ರಂಥಿ ೨. ವಿಷಕಾಲುವೆ ೩. ಕಣ್ಣು ೪. ವಿಷದಂತಗಳು ೫. ನಾಲಿಗೆ

ಪ್ರತಿಯೊಂದು ವಿಷಗ್ರಂಥಿಯಿಂದ ಒಂದು ವಿಷಕಾಲುವೆ ಹೊರಟು ವಿಷದಂತದ ಬುಡಕ್ಕೆ ಬಂದು ಸೇರುತ್ತದೆ. ವಿಷದ ಹಾವುಗಳ ಮೇಲ್ದವಡೆಯ ಮುಂಭಾಗದಲ್ಲಿ ವಿಷದಂತಗಳಿರುತ್ತವೆ. ವಿಷದಂತಗಳ ಮಧ್ಯದಲ್ಲಿ ನಾಳ ಅಥವಾ ಕಾಲುವೆ ಇದ್ದು ಹಾವು ಕಚ್ಚಿದಾಗ ಸಿರಿಂಜಿನ ಸೂಜಿಯಲ್ಲಿ ಬರುವಂತೆ ವಿಷದಂತಗಳ ಮೂಲಕ ವಿಷ ಸ್ನಾಯುಗಳಲ್ಲಿ ಸೇರಿ ರಕ್ತನಾಳಗಳನ್ನು ಪ್ರವೇಶಿಸುತ್ತದೆ. ವಿಷದ ಗ್ರಂಥಿಗಳು ಚೀಲದಂತಿದ್ದು ಅವುಗಳನ್ನು ಲಾಲಾರಸಗ್ರಂಥಿಗಳಿಗೆ ಹೋಲಿಸಬಹುದು. ಈ ಗ್ರಂಥಿಗಳು ಸರಪಳಿ ಮಂಡಲದಲ್ಲಿ ಬಾದಾಮಿ ಕಾಯಿಯಷ್ಟು ದೊಡ್ಡವಿರುವವು. ವಿಷಸರ್ಪಗಳಲ್ಲಿ ಈ ಗ್ರಂಥಿಗಳು ವಿಷಸಂಗ್ರಹ ಮಾಡಿಕೊಂಡಿರುತ್ತವೆ. ವಿಷದ ಹಾವಿನ ವಿಷಗ್ರಂಥಿಗಳಲ್ಲಿ ಜೊಲ್ಲಿನ ರೂಪದ ದ್ರವವು ಉತ್ಪತ್ತಿಯಾಗುತ್ತದೆ. ನಾಗರ ಹಾವಿನ ವಿಷಗ್ರಂಥಿಗಳು ಕೊಳಕುಮಂಡಳ (ಸರಪಳಿಮಂಡಲ)ದಕ್ಕಿಂತಲೂ ದೊಡ್ಡದಾಗಿರುವವು. ಕಟ್ಟುಹಾವಿನಲ್ಲಿ ಚಿಕ್ಕದಾಗಿರುವವು. ಹಾವಿನ ವಿಷವು ಹೊರತೆಗೆದೊಡನೆಯೇ ಬಾದಾಮಿ ಬಣ್ಣದ್ದಾಗುವದು. ಇದು ಗಾಳಿ ಸೋಂಕಿದ ಕೂಡಲೆ ಗಟ್ಟಿಯಾಗುತ್ತದೆ. ರುಚಿಯಲ್ಲಿ ಸ್ವಲ್ಪ ಕಹಿ. ನೀರಿನಲ್ಲಿ ಸುಲಭವಾಗಿ ಕರಗುವದು. ನಾಲಿಗೆಗೆ ಸೋಂಕಿದರೆ ಸೋಂಕಿದ ಭಾಗವು ಮದಡಾಗುವದೆಂದು ತಿಳಿದು ಬಂದಿದೆ.

ವಿಷಪೂರಿತ ಸರ್ಪಗಳು ಕೇವಲ ಕೆಲವೆ ಇರುವದರಿಂದ ಅವುಗಳ ಲಕ್ಷಣ, ಸ್ವಭಾಗಳನ್ನು ನೆನಪಿಡುವದು ಬಹು ಸುಲಭ. ಭಾರತದಲ್ಲಿ ಮುಖ್ಯವಾಗಿ **ನಾಗರ ಹಾವು, ಮಂಡಲದ ಹಾವು,**

ಕಟ್ಟುಹಾವು, **ಹವಳದ** ಹಾವು ಮತ್ತು **ಕಡಲಹಾವು**ಗಳಷ್ಟೇ ವಿಷಪೂರಿತ ಹಾವುಗಳು. ಪ್ರತಿ ವಿಷಪೂರಿತ ಹಾವುಗಳ ಮುಖ್ಯ ಪ್ರಕಾರ, ವಾಸ ಸ್ಥಳ, ಮುಖ್ಯ ಲಕ್ಷಣ, ಬಣ್ಣ ಮತ್ತು ಸ್ವಭಾವ ಇವುಗಳ ಬಗೆಗೆ ಹೆಚ್ಚಿಗೆ ತಿಳುವಳಿಕೆ ಕೊಡಲಾಗಿದೆ. ಭಾರತೀಯ ಕಲೆ, ಕಾವ್ಯ, ಸಂಸ್ಕೃತಿ ಮತ್ತು ಪುರಾಣಗಳಲ್ಲಿ ನಾಗರಹಾವು ಅತ್ಯಂತ ಮಹತ್ವದ ಸ್ಥಾನ ಹೊಂದಿದೆ. ನಾಗಪಂಚಮಿಯ ದಿವಸ ನಾಗರಹಾವನ್ನು ಪೂಜಿಸುವ ಪರಿಪಾಠ ನಮ್ಮಲ್ಲಿದೆ. ನಾಗಸರ್ಪದಲ್ಲಿ ಒಟ್ಟು ಹತ್ತು ಉಪಜಾತಿಗಳಿವೆ. ಅವುಗಳಲ್ಲಿ ಏಳು ಆಫ್ರಿಕಾದಲ್ಲಿ. ಒಂದು ಫಿಲಿಫೈನ್ಸದಲ್ಲಿ, ಕೇವಲ ಎರಡು ಹಿಂದುಸ್ತಾನದಲ್ಲಿ ಕಾಣಸಿಗುತ್ತವೆ. ಇವು ಗೋಂದಿ ನಾಗರ ಮತ್ತು ಕಾಳಿಂಗ ನಾಗರ(ರಾಜನಾಗರ) ಎಂಬ ಮುಖ್ಯ ಪ್ರಕಾರಗಳಲ್ಲಿ ಒಳಗೊಂಡಿವೆ.

(ಅ) ಗೋಂದಿನಾಗರ (Common Cobra)

ಇದು ಭಾರತದ ಹಲವು ಭಾಗಗಳಲ್ಲಿ ಕಂಡುಬರುವದು. ಮುಖ್ಯವಾಗಿ ಭತ್ತಬೆಳೆಯುವ ಭಾಗಗಳಲ್ಲಿ ಹೆಚ್ಚಾಗಿ ಕಾಣಸುವದು. ಸಾಮಾನ್ಯವಾಗಿ ಹಾವುಗಳ ವಾಸಸ್ಥಾನವಲ್ಲದ ಉಷ್ಣ ಪ್ರದೇಶಗಳಲ್ಲಿಯೂ ಇದರ ವಾಸ. ಈ ಸರ್ಪವು ನಿಜವಾಗಿಯೂ ಸರ್ಪಗಳಲ್ಲೆಲ್ಲ ಅತ್ಯಂತ ಸುಂದರವಾಗಿದೆ. ಗೋಂದಿ ನಾಗರಕ್ಕೆ ದಟ್ಟವಾದ ಅರಣ್ಯವಂತೂ ತುಂಬಾ ಅನುಕೂಲಕರವಾದ ವಾಸಸ್ಥಾನ.ಅಲ್ಲದೆ ಬಯಲು ಪ್ರದೇಶ, ತೋಟಗಳು, ಸೌದೆ ಬಣವೆ, ಬಚ್ಚಲು ಮೋರೆ, ಗೋಡೆಗಳ ಬಿರುಕು, ಹಾಳುಹಗೆಗಳು, ಇಲಿಗಳ ಬಿಲಗಳು, ಹಳೆ ಗೋರಿಗಳು, ಹಾಳುಬಿದ್ದ ಮಸೀದೆಗಳು, ಹಾಳು ಹುತ್ತಗಳು, ಸೊಪ್ಪು


ಸೌದೆಗಳಿಂದಾದ ಗುಡಿಸಲುಗಳ ಚಾವಣಿ, ಹುಲ್ಲುಬಣಿವೆ ಮುಂತಾದವುಗಳಲ್ಲಿ ಸಾಮಾನ್ಯವಾಗಿ ಅಡಗಿರುವದು. ಮರದ ಪೊಗರುಗಳಲ್ಲಿಯೂ ಇದರ ವಾಸ. ಪಕ್ಷಿಗಳ ಗೂಡುಗಳಲ್ಲಿಯು ತತ್ತಿ, ಮರಿಗಳ ಅನ್ವೇಷಣೆಗಾಗಿ ಮರಗಳನ್ನು ಏರಬಲ್ಲುದಲ್ಲದೆ ನೀರಿನಲ್ಲಿಯೂ ಈಜಬಲ್ಲದು.

ಐದಾರು ಅಡಿ ಉದ್ದ ಬೆಳೆಯುವ ಈ ಹಾವನ್ನು ಹೆಡೆಯಿಂದ ಗುರುತಿಸುವುದು ಬಹು ಸುಲಭ. ಹೆಡೆಯು ಕುತ್ತಿಗೆಯ ಭಾಗ. ಶಿರದ ಹಿಂದೆಯೇ ಕುತ್ತಿಗೆಯಲ್ಲಿ ಉದ್ದನೆಯ ಪಕ್ಕೆಲಬುಗಳು ಇರುತ್ತವೆ. ಇವಕ್ಕೆ ಹೊಂದಿಕೊಂಡು ಸ್ನಾಯುಗಳು ಇರುತ್ತವೆ. ಸ್ನಾಯುಗಳು ಆಕುಂಚನ ಹೊಂದಿದಾಗ ಪಕ್ಕೆಲಬುಗಳು ಸೆಟೆದು ನಿಂತು ಸುಂದರವಾದ ಹೆಡೆ ಸಿದ್ಧವಾಗುವದು. ಹೆಡೆಯ ಮೇಲ್ಭಾಗದಲ್ಲಿ ಕನ್ನಡಕವನ್ನು ಹೋಲುವ ಒಂದು ಮಚ್ಚೆ ಇರುವದು. ಇದು ಇಂಗ್ಲೀಷ ವರ್ಣಮಾಲೆಯ ವ್ಹಿ (v) ಆಕಾರ ಇರುವದರಿಂದ ಈ ಮಚ್ಚೆಗೆ ಇಂಗ್ಲಿಷಿನಲ್ಲಿ 'ವಿ'"(V) Shaped Spectacle mark" ಎಂದು ಕರೆಯುವರು. ಕೆಲವು ಗೋದಿನಾಗರಗಳಿಗೆ ಹೆಡೆಯ ಮೇಲೆ ವೃತ್ತಾಕಾರದ ಗುರುತು ಮಾತ್ರ ಇದ್ದು ಮಧ್ಯದಲ್ಲಿ ಕರಿ ಚುಕ್ಕಿಗಳಿರುತ್ತವೆ. ಇದಕ್ಕೆ ಬಂಗಾಲನಾಗರವೆಂದು ಕರೆಯುವರು. ಏಕೆಂದರೆ ಬಂಗಾಲ ಪ್ರದೇಶದಲ್ಲಷ್ಟೇ ಇದು ವಾಸವಾಗಿರುವದು. ಕಚ್ಛ, ರಾಜಸ್ಥಾನ, ಕಾಠೇವಾಡ ಮತ್ತು ಮಧ್ಯ ಪ್ರದೇಶದ ಗೋದಿನಾಗರ ಸರ್ಪದ ಹೆಡೆಯ ಮೇಲೆ ಯಾವ ಗುರುತೂ ಇರುವದಿಲ್ಲ. ಗೋದಿನಾಗರದ ತಲೆಯಮೇಲೆ ಅಗಲವಾದ ಮತ್ತು ಚಪ್ಪಟೆಯಾದ ಫಲಕಗಳಿರುತ್ತವೆ. ಇವಕ್ಕೆ ಶಿರಫಲಕ (Head Shield) ಗಳು ಎನ್ನುವರು.



ಚಿತ್ರ ೫. ಗೋದಿ ನಾಗರಹಾವು

ಮೇಲ್ದವಡೆ ಅಂಚಿನ ಮೂರನೆ ಫಲಕ (Third supra Labial shield)ವು ಮೂಗಿನ ಹೊರಳೆಯ ಫಲಕ ಮತ್ತುಕಣ್ಣು ಇವುಗಳ ನಡುವಿನ ಪ್ರದೇಶವನ್ನು ಆವರಿಸುವಷ್ಟು ದೊಡ್ಡದಾಗಿದೆ.



ಚಿತ್ರ ೬. ಮೇಲ್ದವಡೆ ಅಂಚಿನ ಮೂರನೇ ಫಲಕ

ಇದಕ್ಕೆ ಕೆಲವರು ಕವಚ ಎಂದೂ ಕರೆಯುವರು. ಕುತ್ತಿಗೆಯ ಕೆಳಗೆ ಎರಡು ಅಥವಾ ಮೂರು ಕಪ್ಪಾದ ಉದರ ಫಲಕ (Belly plate)ಗಳಿವೆ. ಇವನ್ನು ನಮ್ಮ ಗ್ರಾಮವಾಸಿಗಳು ಗಳಿಗೆ (ಚಿತ್ರ ೭)ಗಳೆಂದೂ ಕರೆಯುವರು. ಗೋದಿಸಾಗರ ಹಾವಿನಿಂದ ಕಚ್ಚಿಸಿಕೊಂಡ ವ್ಯಕ್ತಿಯ ಸಾವಿಗೂ ಮತ್ತು ಗಳಿಗೆಗಳ ಸಂಖ್ಯೆಗೂ ಸಂಬಂಧವನ್ನು ಕಲ್ಪಿಸುತ್ತಾರೆ. ಅಂದರೆ ಎರಡು ಗಳಿಗೆಗಳಿದ್ದ ಹಾವು ಯಾರನ್ನಾದರು ಕಚ್ಚಿದರೆ ಆ ವ್ಯಕ್ತಿ ಎರಡೆ ಗಳಿಗೆಯಲ್ಲಿ ಸಾಯುವನೆಂದೂ. ಮೂರು ಗಳಿಗೆಗಳುಳ್ಳ ನಾಗರ ಹಾವು ಕಚ್ಚಿದರೆ ಮೂರೇ ಗಳಿಗೆಯಲ್ಲಿ ಸಾಯುವನೆಂದೂ ನಂಬುತ್ತಾರೆ. ಆದರೆ ವ್ಯಕ್ತಿಯ ಸಾವಿಗೂ ಗಳಿಗೆಗಳ ಸಂಖ್ಯೆಗೂ ಯಾವ ಸಂಬಂಧವೂ ಇಲ್ಲ.ಇದು

ಕೇವಲ ಮೂಢ ನಂಬಿಕೆ. ಕಚ್ಚಿಸಿಕೊಂಡ ವ್ಯಕ್ತಿಯ ಸಾವು ಗೋದಿ ನಾಗರ ವಿಷದ ಪ್ರಮಾಣವನ್ನು ಅವಲಂಬಿಸಿರುತ್ತದೆ.ಒಬ್ಬ ವ್ಯಕ್ತಿಯ ಸಾವಿಗೆ ಹಾವಿನ ೧೨ ಮಿಲಿಗ್ರಾಂ ವಿಷ ಬೇಕು. ಇನ್ನಿತರ ಲಕ್ಷಣಗ ಳೆಂದರೆ ಹೆಡೆಯ ಬುಡದಲ್ಲಿ ಎರಡು ದುಂಡನೆಯ ಕಪ್ಪು ಗುರುತು (ಚಿತ್ರ ೭) ಗಳಿರುತ್ತವೆ. ಬಾಲದ ಕೆಳಗಿರುವ ಫಲಕ (Subcaudal Shield)ಗಳು ಎರಡಾಗಿ ಒಡೆದಿರುತ್ತವೆ. ಬಣ್ಣದ ಮೇಲಿಂದ ಈ ಹಾವನ್ನು ಗುರ್ತಿಸುವದು ಅಷ್ಟು ಸರಿಯಲ್ಲ. ಹಾವಿಗೆ ಸಂರಕ್ಷಣ ಬಣ್ಣವಿರುವದರಿಂದ ಪರಿಸ್ಥಿತಿಗೆ ಹೊಂದಿಕೊಳ್ಳುವ ಬಣ್ಣವಿರುತ್ತದೆ. ನಾಗರ ಹಾವಿನ ಕಣ್ಣಿನ ಬಣ್ಣ ಮಾತ್ರ ಯಾವಾ ಗಲೂ ಕಪ್ಪು. ಈ ಸರ್ಪಕ್ಕೆ ಮಾನವನಿಂದ ತಪ್ಪಿಸಿಕೊಳ್ಳುವ ಸಹಜ ಸ್ವಭಾವವುಂಟು. ಸಾಮಾನ್ಯವಾಗಿ ಎಲ್ಲ ಹಾವುಗಳಂತೆ ಇದು ಒಂದು ಪುಕ್ಕ ಪ್ರಾಣಿ. ೧೯೬೫ ರಲ್ಲಿ ನಡೆದ ಒಂದು ಸಂಗತಿ. ನಾವೆಲ್ಲಾ ನಮ್ಮ ಗ್ರಾಮದ ಮನೆಯ ಹಿತ್ತಲದಲ್ಲಿರುವಾಗ ಎಲ್ಲಿಂದಲೋ ಒಂದು ಗೋದಿ ನಾಗರವು ನಮಗೆ ಕಾಣಿಸಿಕೊಂಡಿತು. ನಮಗೆ ಹೆದರಿ ಕೂಡಲೇ ನಮ್ಮ ಆವರಣದ ಗೋಡೆಯ ಬಿರುಕಿ ನಲ್ಲಿ ಅಡಗಿಕೊಂಡಿತು. ನಮ್ಮಲ್ಲಿ ಕೆಲವರಿಗೆ ಅದನ್ನು ಹಾಗೆಯೇ ಬಿಡುವ ಮನಸ್ಸಿಲ್ಲದೆ, ಒಂದು ದೊಡ್ಡ ಕೋಲನ್ನು ತೆಗೆದುಕೊಂಡು ಬಂದು, ಹಾವು ಅಡಗಿಕೊಂಡಿದ್ದ ಬಿರುಕಿನಲ್ಲಿ ಸೇರಿಸಿದಾಗ ಮಿಂಚಿನ ವೇಗದಿಂದ ಹೊರಬಿದ್ದು ಹೆಡೆಯನ್ನು ಬಿಚ್ಚಿ ಬುಸುಗುಟ್ಟ ತೊಡ ಗಿತು. ಈ ನೋಟವನ್ನು ಕಂಡ ನಮ್ಮಲ್ಲಿ ಒಬ್ಬರು "ಹಾವು ಹೆಡೆ ಯನ್ನು ಅಲ್ಲಾಡಿಸಿ ಕೊಲ್ಲಬೇಡಿರಿ" ಎಂದು ಬೇಡಿಕೊಳ್ಳುತ್ತಿದ್ದ, ಕೊಂದರೆ ನಮಗೆ ಪಾಪ ತಗಲುತ್ತದೆ, ಅಂದಾಗ ಅದರ ಪಾಡಿಗೆ

ಅದನ್ನು ಬಿಟ್ಟುಕೊಟ್ಟೆವು. ಇತ್ತೀಚೆಗೆ ದಿನಾಂಕ ೯–೧೨–೧೯೭೮ ರಂದು ನಡೆದ ಒಂದು ಘಟನೆ. ನಾವು ದೇವರಗುಡ್ಡಕ್ಕೆ ಹೋಗಿ ಮರಳಿ ಬರವಾಗ ಸಂಜೆ ೫–೩೦ ಘಂಟೆ ಆಗಿತ್ತು. ಒಂದು ತಗ್ಗಿನಲ್ಲಿ ಗೋದಿನಾಗರ ಹಾವು ಕಂಡಿತು. ಅನೇಕ ವರ್ಷಗಳ ನಂತರ ಜೀವಂತ ಗೋದಿನಾಗರ ಹಾವನ್ನು ನಿಸರ್ಗದಲ್ಲಿ ಕಂಡ ನನಗೆ



ಚಿತ್ರ ೭. ಗೋದಿನಾಗರಹಾವಿನ ಕೆಳಭಾಗ

ಎಲ್ಲಿಲ್ಲದ ಆನಂದ. ಇನ್ನಿತರರಿಗೆ ನಾನು ಆ ಹಾವಿಗೆ ಯಾವ ತೊಂದರೆಯನ್ನೂ ಕೊಡಬೇಡಿರಿ ಎಂದು ಹೇಳಿದೆ. ನಾವೆಲ್ಲ ಸ್ವಲ್ಪ ದೂರದಲ್ಲಿ

ನಿಂತೆವು. ನಮ್ಮ ಇರುವಿಕೆಯನ್ನು ಅರಿತುಕೊಂಡ ಹಾವು ವಿರುದ್ಧ ದಿಕ್ಕಿಗೆ ನಾಗಾಲೋಟದಲ್ಲಿ ಓಡತೊಡಗಿತು. ನಾವು ಕೂಡ ಅದರ ಹಿಂದೆಯೇ ಹೋದೆವು. ಆದರೆ ಅದಕ್ಕೆ ಹೇಗಾದರೂ ಮಾಡಿ ನಮ್ಮಿಂದ ತಪ್ಪಿಸಿಕೊಳ್ಳಬೇಕಾದುದರಿಂದ ಎಲ್ಲಿಯೋ ಅವಿತು ಕೊಂಡು ನಮಗೆ ಕಾಣದಾಯಿತು.

ನೀವು ಮಾರ್ಗದಲ್ಲಿ ಹೊರಟಿರುವಿರೆಂದು ಊಹಿಸಿರಿ. ನಿಮ್ಮ ಆಗಮನವನ್ನು ದೂರದಿಂದಲೇ ಅರಿತುಕೊಂಡ ಈಹಾವು ನಿಮ್ಮಿಂದ ತಪ್ಪಿಸಿಕೊಳ್ಳಲು ಭಗೀರಥ ಪ್ರಯತ್ನ ಮಾಡುತ್ತದೆ. ನೀವು ಅಕಸ್ಮಾತ್ ಅದರ ಅತಿ ಹತ್ತರವೇ ಬಂದರೆ ಗತ್ಯಂತರವಿಲ್ಲದೆ ಹೆಡೆಯನ್ನು ಬಿಚ್ಚಿ ರಭಸದಿಂದ ಬುಸುಗುಟ್ಟುವದು. ನೀವು ಹಾಗೆಯೇ ಚಲಿಸದೆ ನಿಂತರೆ, ಇಲ್ಲವೆ ಅಲ್ಲಿಯೇ ಕುಳಿತರೆ, ಅದು ನಿಮಗೇನೂ ಮಾಡದೆ ನೆಲಕ್ಕೆ ಹೆಡೆಯನ್ನು ಅಪ್ಪಳಿಸಿ ಹೊರಟು ಹೋಗುವದು.

ನನ್ನ ತಾಯಿಯವರಿಗೆ ಆದ ಒಂದು ಅನುಭವ. ಹೊಲದಲ್ಲಿ ಅವರು ಕಾಯಿ, ಸೊಪ್ಪು ಬಿಡಿಸುತ್ತಿರುವಾಗ ಎಲ್ಲಿಂದಲೋ ಒಂದು ಗೋದಿನಾಗರ ಎಡಗಡೆ ಭುಜದಿಂದ ಮೈಮೇಲೆ ಏರಿ ಬಲಗಡೆ ಭುಜದಿಂದ ಕೆಳಗೆ ಹರಿದು ಹೊರಟು ಹೋಯಿತಂತೆ. ಗೋದಿನಾಗರ ಕಚ್ಚುವದು ಅವರ ಮೇಲೆ ಕಾಲಿಟ್ಟಾಗ ಇಲ್ಲವೆ ರಾತ್ರಿ ಹೊತ್ತು ಮಲಗಿದಾಗ ಯಾವುದೇ ರೀತಿಯಿಂದ ಅದಕ್ಕೆ ತ್ರಾಸು ಕೊಟ್ಟಾಗ ಮಾತ್ರ. ಇದು ಅವಸರದಿಂದ ಕಚ್ಚಿದಾಗ ಒಮ್ಮೊಮ್ಮೆ ವಿಷವು ತ್ವಚೆಯ ಮೇಲೆ ಹನಿ ಹನಿಯಾಗಿ ಸುರಿಯ ಬಹುದು.

(ಕ) ಕಾಳಿಂಗನಾಗರ (King Cobra)

ಈ ಹಾವಿಗೆ ಕಾಳಿಂಗಸರ್ಪ, ಕೃಷ್ಣಸರ್ಪ ಇಲ್ಲವೆ ರಾಜನಾಗರ ಎಂಬ ಬೇರೆ ಬೇರೆ ಹೆಸರುಗಳಿವೆ.

ದಟ್ಟವಾದ ಅರಣ್ಯವೇ ಇದರ ವಾಸಸ್ಥಳ. ಇದರ ಉದ್ದ ಅತಿ ಕಡಮೆ ಅಂದರೆ ೮ ಅಡಿ. ೧೨



ಚಿತ್ರ ೮. ಕಾಳಿಂಗ ನಾಗರ ಹಾವು

ಅಡಿಯಿಂದ ೧೮ ಅಡಿಯುವರೆಗೂ ಇದು ಬೆಳೆಯು

ವದು. ವಿಷಸರ್ಪಗಳ ಪೈಕಿ ಇದು ಅತಿ ಉದ್ದವಾದುದು. ಪಶ್ಚಿಮ ಘಟ್ಟಗಳ ದಟ್ಟವಾದ ಅರಣ್ಯಗಳು, ಉತ್ತರ ಪ್ರದೇಶದ ಗುಡ್ಡಗಾಡು ಪ್ರದೇಶಗಳು, ನೀಲಗಿರಿ ಬೆಟ್ಟ, ಗೋವಾ ಹಾಗೂ ಕಾರವಾರದ ಸುತ್ತು ಮುತ್ತಲಿನ ಗುಡ್ಡಗಾಡು ಪ್ರದೇಶಗಳಲ್ಲಿಯೂ ಈ ಸರ್ಪಗಳು ವಾಸಿಸುತ್ತವೆ. ಕಾರವಾರದಲ್ಲಿಯೇ ದೊರೆತ ಎರಡು ಕಾಳಿಂಗ ನಾಗರಗಳನ್ನು ಅಲ್ಲಿಯ ಸರಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಣಿಸಂಗ್ರಹಾಲಯದಲ್ಲಿ ಸತ್ತ ಸ್ಥಿತಿಯಲ್ಲಿ ಕಾಯ್ದಿರಿಸಿದ್ದಾರೆ. ಅವು ಉತ್ತಮ ಸ್ಥಿತಿಯಲ್ಲಿ ಜೀವಂತ ಹಾವಿನಂತೆ ಕಾಣಿಸಲು ಆ ಮಹಾವಿದ್ಯಾಲಯದ ಪ್ರಾಣಿಶಾಸ್ತ್ರವಿಭಾಗದ ಸಿಬ್ಬಂದಿವರ್ಗದವರ ಮತ್ತು ಪ್ರಾಚಾರ್ಯರ ಪರಿಶ್ರಮವೇ ಕಾರಣ. ಕಾರವಾರಕ್ಕೆ ಹೋದಾಗ ಈ ಹಾವುಗಳನ್ನು ನೋಡುವ ಅವಕಾಶವನ್ನು ಕಳೆದುಕೊಳ್ಳಬಾರದು.

ಲಾಹೋರ, ಆಸಾಮ, ಓಡಿಸಾ, ಬಿಹಾರ, ಪಶ್ಚಿಮ ಬಂಗಾಲ ಹಾಗೂ ಅಂದಮಾನ ಪ್ರದೇಶಗಳಲ್ಲಿಯೂ ಕಾಳಿಂಗ ನಾಗರಗಳು ಕಾಣಸಿಗುವವು.

ಮುಖ್ಯ ಲಕ್ಷಣಗಳು

ಸ್ವಲ್ಪ ಅರಿಷಿಣವರ್ಣ, ಹಸಿರು, ಕಂದು ಅಥವಾ ಕಪ್ಪು ಈ ತರಹದ ವಿವಿಧ ಬಣ್ಣಗಳು ಆಯಾ ಭೂಗುಣಕ್ಕೆ ಅನುಗುಣವಾಗಿ ಇರುತ್ತವೆ. ದೇಹದ ಮೇಲ್ಭಾಗದಲ್ಲಿ ಕರಿಯ ಅಡ್ಡಪಟ್ಟಿಗಳು. ಕೆಲವರು ಈ ಪಟ್ಟಿಗಳನ್ನು ಬಿಳಿಯ ಇಲ್ಲವೆ ಹಳದಿ ಅಡ್ಡಪಟ್ಟಿಗಳೆಂದೂ ವರ್ಣಿಸಿದ್ದಾರೆ. ಮೈಮೇಲಿನ ವರ್ಣ ಕಪ್ಪು ಇದ್ದಾಗ, ಈ ಬಣ್ಣದಲ್ಲಿ ಎದ್ದು ಕಾಣುವಂತೆ ಬಿಳಿಯ ಇಲ್ಲವೆ ಹಳದಿಯ

ಪಟ್ಟಿಗಳಿರುವ ಸಾಧ್ಯತೆಯೂ ಇದೆ. ಈ ಪಟ್ಟಿಗಳು ಹಾವು ಮುಪ್ಪಾದಂತೆ ಮಸಕಾಗುತ್ತವೆ. ಹಾವು ಅತಿ ಮುಪ್ಪಾದಾಗ ಈ ಪಟ್ಟಿಗಳು ಕಾಣಿಸದೇ ಇರಬಹುದು. ಕುತ್ತಿಗೆಯ ಕೆಳಗಿನ ಅಂದರೆ ಅಂಗುಳದ ಬಣ್ಣವು ತಿಳಿ ಹಳದಿ ಇಲ್ಲವೆ ಕೆನೆಯ ವರ್ಣ ಇರುತ್ತದೆ.

ಗೋದಿನಾಗರ ಹಾವಿಗೆ ಇರುವಂತೆ ಇದರ ಶಿರದ ಮೇಲೆ ಅಗಲವಾದ ಮತ್ತು ಚಪ್ಪಟೆ ಫಲಕಗಳಿರುತ್ತವೆ. ಮೇಲ್ದ ವಡೆಯ ಅಂಚಿನ ಮೂರನೆಯ ಫಲಕವು ದೊಡ್ಡದಿದ್ದು ಮೂಗಿನ ಸೊಳ್ಳೆಯ ಫಲಕ ಮತ್ತು ಕಣ್ಣನ್ನು ಮುಟ್ಟುತ್ತದೆ. (ಚಿತ್ರ ೬)ತಲೆ ಕುತ್ತಿಗೆಗಿಂತ ಅಗಲವಾಗಿದೆ.ಹೆಡೆ ಇದ್ದರೂ ಗೋದಿ ನಾಗರಹಾವಿನ ಹೆಡೆಯಷ್ಟು ಚೆನ್ನಾಗಿ ಬಿಚ್ಚುವದಿಲ್ಲ. ಹೆಡೆಯ ಮೇಲೆ ಯಾವ ಗುರುತೂ ಇಲ್ಲದಿರುವದು ಈ ಹಾವಿನ ಮತ್ತೊಂದು ವೈಶಿಷ್ಟ್ಯ

ಬಾಲದ ಕೆಳಗೆ ಗುದದ್ವಾರದ ಸಮೀಪವಿರುವ ಕೆಲವು ಫಲಕ ಗಳು ಎರಡಾಗಿ ಒಡೆದಿರುವದಿಲ್ಲ.ಅಂದರೆ ಗುದದ್ವಾರದ ಸಮೀಪ ಫಲಕಗಳ ಒಂದೇ ಸಾಲು ಇರುತ್ತದೆ. ದೂರದಲ್ಲಿಯ ಫಲಕಗಳು ಮಾತ್ರ ಎರಡಾಗಿ ಒಡೆದಿರುತ್ತವೆ.

ಸ್ವಭಾವ

ನಾಗರಹಾವಿನ ಜಾತಿಗಳಲ್ಲಿ ಕ್ರೌರ್ಯದಲ್ಲಿಯೂ ಮತ್ತು ಗಾತ್ರದಲ್ಲಿಯೂ ಕಾಳಿಂಗ ನಾಗರ ಹಾವಿಗೆ ಪ್ರಥಮ ಸ್ಥಾನ ಲಭಿ ಸುತ್ತದೆ. ಇದು ನೋಡಿದಾಕ್ಷಣವೇ ಅಂಜಿಕೆ ಬರುವಂತಹ ಅದ್ಭುತ ಹಾವು ಇದ್ದಾಗ್ಯೂ ನಾವಾಗಿಯೇ ಅದಕ್ಕೆ ತ್ರಾಸು ಕೊಡದ ಹೊರತು ನಮ್ಮ ಉಸಾಬರಿಗೇ ಅದು ಬರಲಾರದು. ಈ ಅದ್ಭುತ

ವಾದ ಹಾವಿನ ಅತಿಕ್ರಮಣದ ಬಗ್ಗೆ ತಿಳಿದುಕೊಂಡಿರುವದು ಕೇವಲ ತಪ್ಪು ಕಲ್ಪನೆಯಷ್ಟೆ. ಇತರ ಹಾವುಗಳಂತೆ ಇದು ಕೂಡ ಅಂಜು ಬುರಕ. ಸಾಧ್ಯವಾದ ಮಟ್ಟಿಗೆ ತಪ್ಪಿಸಿಕೊಳ್ಳಲು ಹವಣಿಸುವದು. ವಿಪರೀತ ತ್ರಾಸುಕೊಟ್ಟಾಗ ಮಾತ್ರ ಆತ್ಮರಕ್ಷಣೆಗಾಗಿ ಬಾಯಿ ತೆರೆದುಕೊಂಡು ಎರಗಿಬಂದು ಭುಸ್ಸೆಂದು ಅತಿ ರಭಸದಿಂದ ಸಪ್ಪಳ ಮಾಡುವದು, ರೇಗಿಸಿದರೆ ಕಚ್ಚುವದು.

ಈ ಹಾವಿನ ವಿಷದ ಪ್ರಮಾಣವು ೬ ಸಿ. ಸಿ. ಒಂದು ಆನೆ ಯನ್ನು ಕೊಲ್ಲುವಷ್ಟು ವಿಷ. ಒಂದು ದೊಡ್ಡ ಆನೆಯು ಇದರ ಕಡಿತದಿಂದ ಮೂರು ಗಂಟೆಯ ಒಳಗೆ ಸತ್ತಿತೆಂದು ತಿಳಿದು ಬಂದಿದೆ. ಈ ಹಾವಿನ ವಿಷಕ್ಕೆ ಪ್ರತಿವಿಷವೆಂದರೆ ವಿಷ ನಿರೋಧಕ ಚುಚ್ಚು ಮದ್ದು. ಈ ಮದ್ದು ಥೈಯಲಂಡದಲ್ಲಿ ಸಿಗುತ್ತದೆ.ಗೋದಿ ನಾಗರ ಹಾವಿನ ವಿಷದ ವಿರುದ್ಧ ಉಪಯೋಗಿಸುವ ಚುಚ್ಚುಮದ್ದು ದೇಹದಲ್ಲಿ ವಿಷ ಏರಿದ್ದರೆ ಮಾತ್ರ ಪ್ರಯೋಜನಕಾರಿ ಎಂದು ಹೇಳುವರು. ಕಾಳಿಂಗಸರ್ಪಕ್ಕೆ ಇನ್ನಿತರ ಹಾವುಗಳನ್ನು ತಿನ್ನುವ ಸ್ವಭಾವ. ಬಿದಿರಿನ ಹುಲ್ಲು ಮತ್ತು ರೆಂಬೆಗಳಿಂದ ಗೂಡು ಮಾಡಿ ಕೆಳಗಿನ ಅಂಕಣದಲ್ಲಿ ತತ್ತಿಗಳನ್ನು ಇಡುವದು.

ಸರಪಳಿಮಂಡಲ (Russell's viper), ಕಲ್ಲುಹಾವು (Saw scaled viper) ಹಾಗೂ ಗುಣಿಮಂಡಲ (Pit viper) ಇವಕ್ಕೆಲ್ಲ ಸಾಮಾನ್ಯವಾಗಿ ಮಂಡಲದ ಹಾವುಗಳು ಎನ್ನುವರು. ಈ ಎಲ್ಲ ಹಾವುಗಳಿಗೂ ನಿರ್ದಿಷ್ಟವಾದ ಕುತ್ತಿಗೆ ಇದ್ದು, ಬಾಲ ಚಿಕ್ಕದಾಗಿದೆ.

(ಪ) ಸರಪಳಿ ಮಂಡಲ

ಇದಕ್ಕೆ ಕೊಳಕುಮಂಡಲ ಮತ್ತು ಬಳೆವಡಕ ಎಂಬ ಇತರ ಹೆಸರುಗಳು ಇವೆ. ಇದಕ್ಕೆ ಕೊಳಕುಮಂಡಲವೆನ್ನಲು ಕಾರಣವೇನಂದರೆ ಇದು ಕಚ್ಚಿದ ಭಾಗವು ಸರಿಯಾದ ವೇಳೆಗೆ ಚಿಕತ್ಸೆ ದೊರೆಯದೆ ಇದ್ದರೆ ಕೊಳೆಯುವದೆಂದು ಹೇಳುತ್ತಾರೆ. ವಿಜ್ಞಾನ ಲೋಕಕ್ಕೆ ಈ ಹಾವನ್ನು ೧೭೯೬ರಲ್ಲಿ ಬೆಳಕಿಗೆ ತಂದವರು Patrick Russell ಎಂಬವರು. ಇದೇ ಕಾರಣದಿಂದಲೇ ಈ ವಿಷಸರ್ಪಕ್ಕೆ




ಚಿತ್ರ ೯. ಸರಪಳಿ ಮಂಡಲ

ಇಂಗ್ಲೀಷಿನಲ್ಲಿ ರಸೆಲ್ಸ್ ವೈಪರ್(Russell's viper) ಎಂದು ಕರೆಯುತ್ತಾರೆ. ಈ ಹಾವು ಅಮೇರಿಕೆಯಲ್ಲಿ ದೊರೆಯುವದಿಲ್ಲ.

ಮುಖ್ಯ ಲಕ್ಷಣಗಳು



ಚಿತ್ರ ೧೦. ಸರಪಳಿ ಮಂಡಲದ ತಲೆ



ಚಿತ್ರ ೧೧. ಬೆನ್ನಿನ ಮೇಲೆ ಇರುವ ಉಂಗುರದ ಸರದ ಹಾಗೆ ಇರುವ ಮೂರು ಕಪ್ಪು ಗುರುತುಗಳ ಸರಪಳಿ



ಚಿತ್ರ ೧೨. ಬಾಲದ ಕೆಳಗಿನ ಫಲಕ

ಮುಖ್ಯ ಲಕ್ಷಣಗಳು :

(೧) ಹೃದಯಾಕಾರದ ತಲೆ, ತಲೆಯ ಮೇಲೆಲ್ಲ ಹುರು ಪೆಗಳು, ತಲೆಯು ಎದ್ದು ಕಾಣುತ್ತದೆ.(ಚಿತ್ರ ೧೦) ಪ್ರತಿಯೊಬ್ಬರೂ ಗಮನಿಸುವ ಇನ್ನೊಂದು ಲಕ್ಷಣವೆಂದರೆ ಬೆನ್ನಿನ ಮೇಲೆ ಉಂಗುರದ ಸರದ ಹುಗಿರುವ ಮೂರು ಕಪ್ಪು ಗುರುತುಗಳ ಸರಪಳಿಗಳು ಇರುತ್ತವೆ. (ಚಿತ್ರ ೧೧) ಇದಕ್ಕಾಗಿ ಈ ಹಾವಿಗೆ ಸರಪಳಿ ಮಂಡಲ ಎಂದು ಕರೆಯುತ್ತಾರೆ. ಕೆಲವರು ಈ ಕಪ್ಪು ಗುರತುಗಳಿಗೆ ವಜ್ರಾಕಾರಾದ ಕಪ್ಪು ಬಣ್ಣದ ಸಾಲುಗಳೆಂದೂ ಹೆಸರಿಸುವರು. ಮಧ್ಯದ ಸಾಲು ಪೂರ್ಣವಾಗಿದ್ದು, ಈ ಸಾಲಿನ ಎರಡೂ ಕಡೆ ಅಪೂರ್ಣವಾದ ಸಾಲುಗಳಿರುತ್ತವೆ.

೩) ಮೂಗಿನ ಹೊರಳೆಗಳು ದೊಡ್ಡವು.

೪) ಬಾಲದ ಕೆಳಗಿನ ಫಲಕಗಳು (Subcaudal) ಎರಡಾಗಿ ಒಡೆದಿರುವವು. (ಚಿತ್ರ ೧೨) ಸರಪಳಿ ಮಂಡಲದ ಹಾವಿನ ವರ್ಣ ಮೇಲೆ ಹಳದಿ, ಕೆಳಗೆ ಬಿಳಿಯದಾಗಿದೆ. ಇಂತಹ ವರ್ಣವು ಪರಿಸರಕ್ಕೆ ಹೊಂದಿಕೊಂಡು ಹಾವನ್ನು ರಕ್ಷಿಸುವದು.

ಭಾರತ, ಬರ್ಮಾ, ಸಿಂಹಳದ್ವೀಪ, ಸಯಾಮ, ಸುಮಾತ್ರಾ ಬ್ರಹ್ಮಪುತ್ರಕೊಳ್ಳ ಮತ್ತು ಭೂತಾನ ಗುಡ್ಡದಡಿಯಲ್ಲಿ ಇದು ವಾಸವಾಗಿದೆ. ಬಂಡೆ ಪ್ರದೇಶ, ಹೊಲಗದ್ದೆಗಳ ಸಾಮಿಪ್ಯದಲ್ಲಿಯೂ ಕಂಡುಬರುವದು. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಸಸ್ಯ ಶಾಸ್ತ್ರ ವಿಭಾಗದಲ್ಲಿ ದೊರೆತ ಈ ಮಂಡಲ ಹಾವನ್ನು ಅಲ್ಲಿಯ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಕಾಯ್ದಿರಿಸಿದ್ದನ್ನು ಕಾಣಬಹುದು.ಅಲ್ಲದೆ ಧಾರವಾಡದ ಕೃಷಿ ಮಹಾವಿದ್ಯಾಲಯದಲ್ಲಿ ದೊರೆತ ಎರಡು ಬಳಿವಡಕಗಳನ್ನು ಸತ್ತ ಸ್ಥಿತಿಯಲ್ಲಿ ಕಾಯ್ದಿಡಲಾಗಿದೆ.

ಸ್ವಭಾವ :

ಇದೊಂದು ನಿಶಾಚರಿ ಹಾವು. ಇಲಿ, ಕಪ್ಪೆಗಳ ಅನ್ವೇಷಣೆಗಾಗಿ ಸಂಜೆಯ ವೇಳೆ ಹೊರಬರುವದು. ಹಗಲು ಹೊತ್ತಿನಲ್ಲಿ ಮಾತ್ರ ಅತಿ ಆಲಸಿಯಾಗಿದ್ದು, ಮರದ ತುಂಡಿನಂತೆ ಅಲುಗಾಡದೆ ಬಿದ್ದುಕೊಂಡಿರುತ್ತದೆ. ಇದು ಸುರಳಿಸುತ್ತಿಕೊಂಡಿರುವ ವೈಖರಿಯೇ ಬೇರೆ. (ಚಿತ್ರ ೯). ವಿನಾಕಾರಣ ಯಾವ ಪ್ರಾಣಿಯನ್ನೂ ಕಚ್ಚುವದಿಲ್ಲ. ಯಾರಾದರೂ ಅಕಸ್ಮಾತ್ ತುಳಿದರೆ ಇಲ್ಲವೆ ಹೊಡೆದರೆ ತಲೆಯನ್ನು ಮೇಲಕ್ಕೆ ಎತ್ತಿ ಭಯಂಕರ ಸಪ್ಪಳ ಮಾಡುವದು. ಈ ತರಹದ ಸಪ್ಪಳವನ್ನು ಕಾಲುಚೆಂಡಿನ (Foot ball) ರಬ್ಬರ ಚೀಲದಿಂದ ಗಾಳಿ ಹೊರಬೀಳುವಾಗ ಆಗುವ ಸಪ್ಪಳಕ್ಕೆ ಹೋಲಿಸಬಹುದು. ಹೀಗೆ ಶಬ್ದ ಮಾಡುತ್ತ ಬಾಯಿಯನ್ನು ಬಹಳ ಅಗಲವಾಗಿ ತೆರೆದು ಅರ್ಧ ಇಂಚು ಉದ್ದದ ವಿಷದಂತಗಳನ್ನು ಮುಂದಕ್ಕೆ ಚಾಚಿ ಕಚ್ಚಬೇಕಾದ ಭಾಗದ ಮೇಲೆ ಬಹು ಬಿರುಸಾಗಿ ಹೊಡೆಯುವದು. ಆಳವಾದ ಗಾಯಗಳಾದ ಮೇಲೆ, ವಿಷದಂತಗಳನ್ನು ಮಾಂಸಖಂಡದೊಳಗೆ ನೂಕಿ ವಿಷ ಸುರಿಸುವದು. ಇಷ್ಟೆಲ್ಲ ಕ್ರಿಯೆ ಕ್ಷಣದಲ್ಲಿಯೇ ಮುಗಿದುಬಿಡುವದು. ನಮ್ಮ ದೇಹದ ಮೇಲಿನ ಉಡುಪು ದಪ್ಪವಿದ್ದರೂ, ವಿಷದಹಲ್ಲುಗಳು ಉದ್ದವಾಗಿರುವದರಿಂದ, ಈ ಹಾವಿನ ಕಡಿತದಿಂದ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ. ವಿಷದ ಉಗ್ರತೆಯಲ್ಲಿ ಈ ಸರ್ಪ ಕಾಳಿಂಗ ನಾಗರದ ತರುವಾಯ ಎರಡನೆಯ ಸ್ಥಾನ ಪಡೆದಿದೆ. ಇದು ಕಚ್ಚಿದ ೨೪ ಘಂಟೆಗಳೊಳಗಾಗಿ ಸಾವು ಸಂಭವಿಸುವದು.

(ಇ) ಕಲ್ಲು ಹಾವು :

ಹಗಲು ಹೊತ್ತಿನಲ್ಲಿ ಕಲ್ಲಿನ ಕೆಳಗೆ ಸುರಳಿಸುತ್ತಿಕೊಂಡು ಬಿದ್ದಿರುವದರಿಂದಲೇ ಇದಕ್ಕೆ ಕಲ್ಲು ಹಾವು ಎಂದು ಕರೆಯುವರು. ಸುರಳಿಸುತ್ತಿಕೊಂಡಿರುವಾಗ ಇಂಗ್ಲೀಷ ಅಂಕಿ ಎಂಟರ(8) ಆಕಾರ ದಲ್ಲಿ ಗೋಚರಿಸುವದು. ಹೀಗೆ ಸುತ್ತಿಕೊಂಡಿರುವದು ಈ ಹಾವನ್ನು ಗುರ್ತಿಸುವ ನಿಖರವಾದ ಚಿಹ್ನೆ..



ಚಿತ್ರ ೧೩. ಸುರಳಿಸುತ್ತಿಕೊಂಡಿರುವ ಹಾವು

ಭಾರತದ ಕೆಲವು ಭಾಗಗಳಲ್ಲಿ ಇದು ಸಾಮಾನ್ಯವಾಗಿ ಕಂಡುಬರುವದು. ಬಹುತರವಾಗಿ ಬಯಲು ಪ್ರದೇಶದಲ್ಲಿ ಇದರ ವಾಸ. ರತ್ನಾಗಿರಿ, ಪಂಜಾಬದ ಕೆಲ ಪ್ರದೇಶಗಳು, ರಾಜಸ್ತಾನ, ಕೊಂಕಣದ ಕೆಲಭಾಗಗಳು, ತಮಿಳುನಾಡು ಮತ್ತು ಆಂಧ್ರಪ್ರದೇಶ ಗಳಲ್ಲಿ ವಾಸವಾಗಿದೆ. ಈ ವಿಷಸರ್ಪಗಳು ಮರುಭೂಮಿಯಲ್ಲಿ

ಕಲ್ಲುಕೆಳಗೆ, ಗಿಡದ ತೊಗಟೆಯ ಹಿಂದೆ, ಅಲ್ಲದೆ ಮುಳ್ಳುಕಂಟಿ ಗಳಲ್ಲಿ ಅಡಗಿಕೊಂಡಿರುವವು.

ಉಳಿದ ಮಂಡಲಗಳಿಗೆ ಹೋಲಿಸಿದಾಗ ಇದು ಬಹು ಚಿಕ್ಕದು. ಇದರ ಸರಾಸರಿ ಉದ್ದ ೧ಅಡಿ ೬ ಇಂಚು. ಕೆಲವು ೨ಅಡಿಯಿಂದ ೨ಅಡಿ ೭ ಇಂಚುಗಳವರೆಗೆ ಉದ್ದವಾಗಿರುವದು ಕಂಡುಬಂದಿದೆ.

ಈ ಸರ್ಪವು ಕೂಡ ಕಂದು ಸಂರಕ್ಷಣ ಬಣ್ಣವನ್ನು ಪಡೆ ದಿರುತ್ತದೆ. ಪರಿಸರಕ್ಕೆ ಅತಿಯಾಗಿ ಹೊಂದಿಕೊಂಡಿರುತ್ತದೆ. ಚಲಿಸಿ ದಾಗಲೇ ಇದರ ಇರುವಿಕೆ ಗೊತ್ತಾಗುವದು. ಕೆಳಗಿನ ಬಣ್ಣ ಬಿಳಿ. ಶಿರವು ಕುತ್ತಿಗೆಗಿಂತ ಅಗಲ, ತ್ರಿಕೋನಾಕಾರದ್ದು. ಕಣ್ಣುಗಳು ದೊಡ್ಡವು. ತಲೆಯಮೇಲೆ ಒಂದು ಬಿಳಿಯ ಮಚ್ಚೆಯಿದ್ದು, ಅದು ಪಕ್ಷಿಯ ಹೆಜ್ಜೆ ಅಥವಾ ಅಗಲವಾದ ಬಾಣವನ್ನು ಹೋಲುತ್ತದೆ. ಮೈಮೇಲೆ ಅಂಕುಡೊಂಕಾದ ಕಪ್ಪು ಗೆರೆಗಳಿರುತ್ತವೆ. ಅಲ್ಲದೆ ಸ್ಪಷ್ಟ ಅಡ್ಡಗೆರೆಗಳೂ ಉಂಟು. ಇದರ ಮೇಲ್ಭಾಗದ ಹುರುಪೆ ಗಳೆಲ್ಲಾ ಒಂದೇ ತೆರನಾಗಿದ್ದು ಅವುಗಳ ಅಂಚುಗಳಿಗೆ ಗರಗಸಕ್ಕೆ ಇರುವಂತೆ ಹಲ್ಲುಗಳು ಇರುತ್ತವೆ. ಈ ಕಾರಣದಿಂದಲೇ ಈ ವಿಷ ಸರ್ಪಕ್ಕೆ ಗರಗಸು ಹುರುಪೆ ಮಂಡಲ ಎಂದೂ ಕರೆಯುವರು.

ಬಾಲದ ಕೆಳಗಿನ ಫಲಕಗಳು ಒಡೆದಿರುವದಿಲ್ಲ. ಈ ಲಕ್ಷಣವು ಇತರ ಮಂಡಲಗಳಿಗಿಂತ ವ್ಯತ್ಯಾಸವಾಗಿರುತ್ತದೆ.

ಸ್ವಭಾವ :

ಉಸುಕು ಪ್ರದೇಶದಲ್ಲಿ ವಾಸವಾಗಿದ್ದ ಪಕ್ಷದಲ್ಲಿ ಉಸುಕಿನ ಲ್ಲಿಯೇ ಹುದುಗಿಕೊಂಡಿರುವದು ಇದರ ಸಹಜ ಸ್ವಭಾವ. ಇದಕ್ಕೆ

ತೊಂದರೆ ಪಡಿಸಿದಾಗ ತನ್ನ ಎರಡೂ ಸುರಳಿಗಳನ್ನು ಬಲವಾಗಿ ತಿಕ್ಕುವುದರಿಂದ ಒಂದು ತರಹದ ಸಪ್ಪಳವಾಗುವದು. ಈ ಸಪ್ಪಳ ಉಸುಕಿನ ಕಾಗದಗಳನ್ನು ತಿಕ್ಕಿದಾಗ ಆಗುವ ಸಪ್ಪಳದಂತೆ ಇರುತ್ತದೆ. ಇದು ಚಲಿಸುವಾಗ ಇದರದೇ ಆದ ಒಂದು ಠೀವಿ ಇರುತ್ತದೆ. ಬದಿಯಿಂದ ಬದಿಗೆ ಹೊಸೆಯುತ್ತ ಚಲಿಸುವುದರಿಂದ ಇಂಗ್ಲೀಷನಲ್ಲಿ Side winder ಅನ್ನುತ್ತಾರೆ. ಅಂದರೆ ಪಾರ್ಶ್ವ ಹೊಸೆಯುವದು. ಒಬ್ಬ ವ್ಯಕ್ತಿಯ ಸಾವಿಗೆ ಇದರ ೮ ಮಿಲಿಗ್ರಾಂ ವಿಷ ಸಾಕು. ಇದು ಕಚ್ಚಿದಾಗ ಸಾವು ಕೂಡಲೇ ಸಂಭವಿಸದೆ. ಹಲವಾರು ದಿನಗಳ ನಂತರ ವಸಡಿ, ಮೂಗಿನ ಹೊರಳೆ, ಕಿವಿ, ಕಣ್ಣು, ಗುದದ್ವಾರ, ಮೂತ್ರದಲ್ಲಿ ರಕ್ತಸ್ರಾವವಾಗುವದು.

(ಈ) ಗುಣಿಮಂಡಲ (Pit vipor)

ಇದಕ್ಕೆ ಹಳ್ಳದ ಹಾವು ಎಂದೂ ಕರೆಯುವರು. ಹಳ್ಳ ಶಬ್ದವನ್ನು ಗುಣಿ ಇಲ್ಲವೆ ಕುಣಿ(pit) ಅರ್ಥವನ್ನು ಕೊಡಲು ಉಪಯೋಗಿಸಲಾಗಿದೆ. ಹಳ್ಳದ ಹಾವು ಅಂದಾಕ್ಷಣ ಹಳ್ಳದಲ್ಲಿರುವದು ಎಂಬ ತಪ್ಪು ಕಲ್ಪನೆಯುನ್ನು ಮಾಡಿಕೊಳ್ಳಬಾರದು.

ಈ ಹಾವು ಗುಡ್ಡಗಾಡು ಪ್ರದೇಶಗಳಲ್ಲಿ ಕಾಣಸಿಗುವದು. ೧೫೦೦ ರಿಂದ ೧೦,೦೦೦ ಅಡಿ ಎತ್ತರವಾದ ಪ್ರದೇಶದಲ್ಲಿರುತ್ತದೆ. ಜೀವಂತ ಗುಣಿಮಂಡಲಗಳನ್ನು ನಾನು ಪ್ರಥಮತಃ ಕಂಡದ್ದು ಶಿವಮೊಗ್ಗೆ ಜಿಲ್ಲೆಯ ಕೆಮ್ಮನಗುಂಡಿಯಲ್ಲಿ ೧೯೬೩ನೆಯ ಇಸ್ವಿಯಲ್ಲಿ ಅಲ್ಲಿ ನಾವು ದೊಡ್ಡಬೇ ಫಾಲ್ಸ ಕಡೆಗೆ ಹೊರಟಿದ್ದೆವು. ಎತ್ತರ



ಚಿತ್ರ ೧೪. ಗುಣಿಮಂಡಲ ಹಾವು

ಪ್ರದೇಶದಿಂದ ಕೆಳಗೆ ಇಳಿಯುವಾಗ ಕಂಟಿಗಳ ಸಹಾಯದಿಂದ ಇಳಿಯಬೇಕಾದ ಪ್ರಸಂಗ. ನಾನು ಯಾವ ಕಂಟಿಯ ರೆಂಬೆಯನ್ನು ಹಿಡಿದಿದ್ದೆನೋ ಅಲ್ಲಿಯೇ ಹಾವು ಕುಳಿತಿತ್ತು. ರೆಂಬೆಗೆ ಸುತ್ತು ಹಾಕಿಕೊಂಡು ಪರಿಸರಕ್ಕೆ ಅಷ್ಟು ಚನ್ನಾಗಿ ಹೊಂದಿಕೊಂಡಿದ್ದುದರಿಂದ ಅದರ ಇರುವಿಕೆ ಒಮ್ಮೆಲೇ ನನಗೆ ತಿಳಿಯಲಿಲ್ಲ. ಬಹು ಕಾಳಜಿಪೂರ್ವಕ ನೋಡಿದಾಗ ಕಾಣಿಸಿಕೊಂಡದ್ದು ಮತ್ತು ಅದರ ಕಡಿತದಿಂದ ನಾನು ಪಾರಾದದ್ದು ನನ್ನ ಸುದೈವವೇ ಸರಿ. ನನ್ನ ಸಂಗಡಿಗರನ್ನು ಕರೆದು ತೋರಿಸಿ, ನಂತರ ಒಂದು ದೊಡ್ಡ ಚಿಮ್ಮಟಿಗೆಯ ಸಹಾಯದಿಂದ ಅದನ್ನು ಹಿಡಿದು ಬಾಟ್ಲಿಯಲ್ಲಿ ಹಾಕಿಕೊಂಡೆವು. ಸ್ವಲ್ಪ ಸಮಯದಲ್ಲಿ ಅದು



ಚಿತ್ರ ೧೫. ಗುಣಿಮಂಡಲ ಹಾವಿನ ತಲೆ

ಸತ್ತಿತು. ಕಲಕತ್ತಾ, ಬರೋಡಾ, ಹಿಮಾಲಯ, ಅಂದಮಾನ ಮತ್ತು ನಿಕೋಬಾರ ಪ್ರದೇಶಗಳಲ್ಲಿ ಈ ಮಂಡಲಗಳು ಕಾಣಸಿಗುವವು.

ಮೇಲ್ಬದಿಗೆ ಸ್ವಲ್ಪ ಹಸಿರು, ಇಲ್ಲವೆ ನೀಲಿಮಿಶ್ರಿತ (ಚಿತ್ರ ೧೪) ಕಂದುಬಣ್ಣ, ಕಪ್ಪುಗುರುತುಗಳು ಅಡ್ಡಪಟ್ಟಿಗಳಂತೆ ಕಾಣಿಸುವವು. ಮಧ್ಯೆ ಬಿಳಿಯ ಪಟ್ಟಿಗಳೂ ಉಂಟು. ಅತಿ ಮುಖ್ಯವಾದ ಮತ್ತು ನೆನಪಿಡಲೇಬೇಕಾದ ಲಕ್ಷಣವೆಂದರೆ(ಚಿತ್ರ ೧೫)ಕಣ್ಣಿಗೂ ಮೂಗಿಗೂ ನಡುವೆ ಇರುವ ಫಲಕ ಒಂದರಲ್ಲಿ ಗುಣಿ (Pit) ಇರುವದು. ಇಬ್ಬದಿಗೆ ಇರುವ ಈ ಗುಣಿಗಳು ಮೂಗಿನ ಹೊರಳೆಗಳಂತೆ ಕಾಣಿಸುವವು. ಈ ಗುಣಿಗಳಿರುವದರಿಂದಲೇ ಈ ವಿಷಸರ್ಪಕ್ಕೆ ಗುಣಿ ಮಂಡಲವೆಂದು ಕರೆಯುವ ವಾಡಿಕೆ. ತಲೆಯು ಅಗಲ, ತ್ರಿಕೋನಾಕಾರದ್ದು. ಕುತ್ತಿಗೆಯು ತೆಳುವಾಗಿರುತ್ತದೆ ಹಾಗು ಸ್ಪಷ್ಟವಾಗಿ ಗೋಚರಿಸುತ್ತದೆ. ಬಾಲವು ಕೊಕ್ಕೆಯಂತೆ ಇದ್ದು, ಇದರ ಸಹಾಯದಿಂದ ಪೊದೆಯ ರೆಂಬೆಯನ್ನು ಸುತ್ತಿಕೊಂಡು ಜೀವನವನ್ನು ಸಾಗಿಸುತ್ತದೆ. ಬಾಲದ ಕೆಳಗಿನ ಫಲಕಗಳು ಒಡೆದಿರುತ್ತವೆ. ಮೇಲಿನ ತುಟಿಯ ಮುಂಭಾಗವು ಎದ್ದು ಕಾಣುತ್ತದೆ. ಇದಕ್ಕೆ ದೊಡ್ಡ ಕಣ್ಣುಗಳು ಉಂಟು. ಇದು ಬಹು ಪುಕ್ಕ ಪ್ರಾಣಿ. ಸ್ವಲ್ಪ ಸಪ್ಪಳವಾದರೆ ಸಾಕು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಬಹುವಿಧವಾಗಿ ಪೀಡಿಸಿದಾಗ ಕಚ್ಚದೆ ಬಿಡಲಾರದು. ಆಫ್ರಿಕಾದಲ್ಲಿ ಗುಣಿಮಂಡಲಗಳಿಲ್ಲ. ಅಮೇರಿಕದ ಅತಿ ಪ್ರಸಿದ್ಧವಾದ ರ್‍ಯಾಟಲ್ ಮಂಡಲವು ಈ ಜಾತಿಗೆ ಸೇರಿದುದು.

ಕಟ್ಟುಹಾವು (Krait)

ಇವುಗಳಿಗೆ ಕಡಂಬಳ ಅಲ್ಲದೆ ಕನ್ನಡಿ ಹಾವುಗಳೆಂದೂ ಕರೆಯುವರು. ಇವು ಬಯಲು ಪ್ರದೇಶಗಳಲ್ಲಿ ವಾಸಿಸುವವು.

ಸಾಮಾನ್ಯ ಲಕ್ಷಣಗಳು :


(೧) ಬಾಯಿ ಚಿಕ್ಕದು.

(೨) ವಿಷದ ಹಲ್ಲುಗಳು ಚಿಕ್ಕವು

(೩) ನಾಗರ ಹಾವಿಗೆ ಇರುವಂತೆ ಶಿರಫಲಕಗಳಿರುತ್ತವೆ.

(೪) ಕೆಳ ತುಟಿಯು ಅಂಚಿನಗುಂಟ ಕೇವಲ ನಾಲ್ಕೆ ಫಲಕಗಳಿದ್ದು ನಾಲ್ಕನೆಯ ಫಲಕವು ಎಲ್ಲಕ್ಕೂ ದೊಡ್ಡದು.

(೫) ಬೆನ್ನಿನ ಮಧ್ಯಭಾಗದಲ್ಲಿ ಉದ್ದಕ್ಕೂ ಆರು ಭುಜಗಳುಳ್ಳ ಹುರುಪೆಗಳಿಂದಾದ ಸರಪಳಿ ಇರುವದು



ಚಿತ್ರ ೧೬. ಹುರುಪೆಗಳಿಂದಾದ ಸರಪಳಿ

(೬) ಬಾಲವು ದುಂಡಗೆ ಇರುವದೊಂದು ಈ ವಿಷಾರಿ ಸರ್ಪಗಳ ವೈಶಿಷ್ಟ್ಯ.

(೭) ಬಾಲದ ಕೆಳಗಿನ ಫಲಕ ಒಡೆದಿರುವದಿಲ್ಲ.



ಚಿತ್ರ ೧೭.

ಚಿತ್ರ ೧೭. ಬಾಲದ ಕೆಳಗಿನಗಳು ಫಲಕಗಳು ಒಡೆಯದಿರುವ್ರದನ್ನು ತೋರಿಸುತ್ತದೆ. ಕಟ್ಟುಹಾವುಗಳಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳು.

ಉ) ಗೋದಿನಾಸರ (Common Krait)

ಊ) ಪಟ್ಟಿ ಕಟ್ಟು ಹಾವು (Banded Krait).

(ಉ) ಗೋದಿ ನಾಸರ ಈ ವಿಷಾರಿ ಸರ್ಪಕ್ಕೆ ಸಾಮಾನ್ಯ ಕಟ್ಟು ಹಾವು ಎಂತಲೂ ಕರೆಯಬಹುದು. ಇವು ವಾಸಿಸುವಂತಹ ಬೇರೆ ಬೇರೆ ಪ್ರದೇಶಗಳಾವವೆಂದರೆ ಭಾರತ, ಅಂದಮಾನ ಹಾಗೂ ನಿಕೋಬಾರ. ತೋಟಪಟ್ಟಿ, ವರಾಂಡಾ, ಬಚ್ಚಲುಮನೆ, ಬಾಗಿಲು ತೋಳು, ಪುಸ್ತಕಗಳನ್ನು ಇಡುವ ಕಪಾಟು, ಮನೆಯ ಮೇಲ್ಛಾವಣಿ, ಮೆಟ್ಟಲುಗಳು ಮತ್ತು ಪಾತ್ರೆ ಇಡುವ ಕಟ್ಟೆ ಮುಂತಾದ ಸ್ಥಳಗಳಲ್ಲಿ ಇವನ್ನು ಕಾಣಬಹುದು.




ಚಿತ್ರ ೧೮. ಗೋದಿನಾಸರ ಹಾವು

ಈ ಹಾವು ಸುಮಾರು ೪ ರಿಂದ ೬ ಅಡಿಯುವರೆಗೆ ಉದ್ದ ವಾಗಿದ್ದು ಕಪ್ಪು ಮಿಶ್ರಿತ ನೀಲಿವರ್ಣಹೊಂದಿದೆ. ತಳದ ಭಾಗ ಬಿಳಿಯದು. ತಲೆಯ ಆಕಾರ ದುಂಡಗೆ. ಮೇಲ್ಭಾದಿಯಲ್ಲಿ ಕಮಾನಿನಾಕರದ ಅಚ್ಚ ಬಿಳಿರೇಖೆಗಳು. ಈ ರೇಖೆಗಳು ಮುಂಡ ಮತ್ತು ಬಾಲದ ಮೇಲೆ ಬಹು ನಿಚ್ಚಳವಾಗಿ ಕಾಣುವವು. ರಾತ್ರಿಯ ಸಮಯದಲ್ಲಿ ಮನೆಯ ಅಕ್ಕ, ಪಕ್ಕದಲ್ಲಿ ಆಹಾರ ಹುಡುಕುತ್ತ ಸುಳಿದಾಡುವದು. ಇದು ಸುರಳಿ ಸುತ್ತಿಕೊಂಡಿರುವ ರೀತಿಯೇ ಬೇರೆ. ಇದರ ಸುರಳಿಯ ಸಹಾಯದಿಂದ ಗುರ್ತಿಸುವ ಸಾಧ್ಯತೆ. ಇದೆ. ಗಂಡು ಮತ್ತು ಹೆಣ್ಣು ಹಾವುಗಳು ಕೂಡಿಯೇ ಹೊರ ಬೀಳುವದು ಅವುಗಳ ಒಂದು ಅಪೂರ್ವ ಸ್ವಭಾವವಾಗಿದೆ.

(ಊ) ಪಟ್ಟೆಕಟ್ಟೆ ಹಾವು :

ಆಸಾಮು, ಬಂಗಾಲ, ಬಿಹಾರ, ಓಡಿಸಾ, ಮಧ್ಯಪ್ರದೇಶ, ಆಂಧ್ರಪ್ರದೇಶ ಮಹಾನದಿಯ ದಂಡೆ, ಚೀನಾ ಮತ್ತು

ಮಲೆಯಾಗಳಲ್ಲಿ ಇವು ವಾಸಿಸುವವು. ಇವನ್ನು ಹಾಳು ಹುತ್ತು ಮತ್ತು ಇಲಿ, ಹೆಗ್ಗಣಗಳ ಬಿಲಗಳಲ್ಲಿ ಕಾಣಬಹುದು



ಚಿತ್ರ ೧೯. ಪಟ್ಟಿಕಟ್ಟು ಹಾವು

ಮೈಮೇಲ್ಭಾಗದಿಯಲೆಲ್ಲ ಅಂದರೆ ಕುತ್ತಿಗೆಯಿಂದ ಆರಂಭವಾಗಿ ಬಾಲದ ತುದಿಯವರೆಗೂ ಹಳದಿ ಮತ್ತು ಕರಿಯ ಅಡ್ಡ ಪಟ್ಟಿಗಳು ಶಿಪಾಯಿ ಸುತ್ತಲೂ ಇರುವ ಪಟ್ಟಿಗಳಂತೆ ಕಾಣಿಸುತ್ತವೆ. ಪಟ್ಟಿಗಳ ಅಗಲ ಒಂದರಿಂದ ಒಂದುವರೆ ಇಂಚು. ನೋಟಕ್ಕೆ ಭಯಾನಕ ಮತ್ತು ಸುಂದರವಾಗಿ ಗೋಚರಿಸುವದು. ಮಧ್ಯಪ್ರದೇಶದಲ್ಲಿ ಮಳೆಗಾಲ ಆರಂಭವಾದ ನಂತರ ಕಾಣಸಿಗುವದು. ಪುಕ್ಕಲು ಸ್ವಭಾವ. ಮಾನವನನ್ನು ಕಂಡ ಕೂಡಲೇ ಮರೆಯಾಗುವದು.

ಇದಕ್ಕೆ ತೊಂದರೆ ಕೊಟ್ಟಾಗ ಮಾತ್ರ ಕೋಪಗೊಂಡು ಕಚ್ಚುವದು. ಇದು ಸುರಳಿಸುತ್ತಿಕೊಂಡಿರುವ ರೀತಿ ಉಳಿದ ಸರ್ಪಗಳಿಗಿಂತ ಭಿನ್ನವಾಗಿರುತ್ತದೆ.

(೩) ಹವಳದ ಹಾವು (Coral Snake):

ಮದ್ರಾಸ ಸಮೀಪ ಸಮುದ್ರ ತೀರದ ಗುಂಟ ಇರುವ ಅರಣ್ಯ ಪ್ರದೇಶಗಳಲ್ಲಿ ಇದರ ವಾಸ. ಡಾಕ್ಟರ ಘಾರಪುರೆ ಅವರ ಪುಸ್ತಕದಲ್ಲಿ ವರದಿಯಾಗುವಂತೆ ಧಾರವಾಡ ಜಿಲ್ಲೆಯ ಗದಗ ದಲ್ಲಿಯೂ ಹವಳದ ಹಾವು ಸಿಕ್ಕಿದೆ. ನಾಶಿಕ, ಧುಳಿಯಾ ಹಾಗೂ ಅಹ್ಮದನಗರದಲ್ಲಿಯೂ ಇದು ವಾಸವಾಗಿದೆ.

ತರಗೆಲೆಗಳ ಕೆಳಭಾಗದಲ್ಲಿ, ಇಟ್ಟಿಗೆಗಳ ಮಧ್ಯದಲ್ಲಿ, ಕಸಕಡ್ಡಿಗಳಲ್ಲಿ ಅಲ್ಲದೆ ಉಸುಬು ಪ್ರದೇಶದಲ್ಲಿ ಇದನ್ನು ಕಾಣಬಹುದು. ಕುತ್ತಿಗೆ ಮತ್ತು ತಲೆ ಕಪ್ಪು ವರ್ಣದವು, ತಲೆಯ ಮೇಲೆ ಎರಡು ಸ್ಪಷ್ಟವಾದ ಹಳದಿಯ ಗುರುತುಗಳಿರುತ್ತವೆ. ಬಾಲದ ಬುಡದಲ್ಲಿ ಮತ್ತು ತುದಿಯಲ್ಲಿ ಒಂದು ಅಪೂರ್ಣವಾದ ಕರಿಯ ಉಂಗುರವಿರುತ್ತದೆ. ಉದರ ಭಾಗವು ಹವಳದ ಬಣ್ಣದ್ದು. ಆದ್ದರಿಂದ ಈ ಸರ್ಪಕ್ಕೆ ಹವಳದ ಹಾವು ಎಂದು ಕರೆಯುತ್ತಾರೆ.




ಚಿತ್ರ ೧೧. ಹವಳದ ಹಾವು

ಶಿರವು ಮೊಂಡವಿದ್ದು ಕುತ್ತಿಗೆಯಷ್ಟೇ ಅಗಲವಿರುತ್ತದೆ. ಮೇಲ್ದುಟಿಯ ಅಂಚಿನಗುಂಟ ಇರುವ ಮೂರನೆಯ ಫಲಕವು ಉಳಿದವುಗಳಿಗಿಂತ ದೊಡ್ಡದು. (ಇದೊಂದು ಲಕ್ಷಣದಲ್ಲಿ ನಾಗರಹಾವನ್ನು ಹೋಲುತ್ತದೆ) ಈ ಫಲಕವು ಮೂಗಿನ ಹೊರಳೆಯ ಫಲಕ ಮತ್ತು ಕಣ್ಣನ್ನು ಮುಟ್ಟುತ್ತದೆ. ನಿಶಾಚರಿಯಾದರೂ ಒಮ್ಮೊಮ್ಮೆ ಚಳಿಗಾಲದಲ್ಲಿ ಬೆಳಗಿನಜಾವದಲ್ಲಿಯೂ ತನ್ನ ಚಟುವಟಿಕೆ ತೋರಿಸುತ್ತದೆ. ಶಿರಭಾಗವನ್ನಷ್ಟು ಬಿಟ್ಟು ಉಳಿದ ಭಾಗವೆಲ್ಲ ಸಾಮಾನ್ಯ ಪರಿಸ್ಥಿಯಯಲ್ಲಿ ಹುದುಗಿಕೊಂಡಿರುತ್ತದೆ. ಇದು ಬಹು ಪುಕ್ಕ ಸ್ವಭಾವದ ಪ್ರಾಣಿ. ತಡವಿದಾಗ ಬಾಲವನ್ನಷ್ಟೇ ಮೇಲೆತ್ತಿ ಅಲುಗಾಡಿಸುತ್ತದೆ. ಇಷ್ಟೇ ಅಲ್ಲದೆ ಸುಂದರವಾದ ಹವಳ ವರ್ಣದ ಉದರಭಾಗವನ್ನು ಪ್ರದರ್ಶಿಸಿ ತಲೆಯ ಕಡೆಗಿನ ಲಕ್ಷ್ಯವನ್ನು ಉದರದ ಕಡೆಗೆ ಸೆಳೆದುಕೊಳ್ಳುತ್ತದೆ. ಇದೊಂದು ಅತಿಮೋಜಿನ ಹೊಂದಾಣಿಕೆ.

(೬) ಕಡಲಹಾವು (Sea Snake)

ಸಮುದ್ರ ಮತ್ತು ನಡುಗಡ್ಡೆಗಳಲ್ಲಿ ಈ ವಿಷಾರಿ ಸರ್ಪಗಳ ವಾಸ. ಮೀನುಗಳೊಡನೆ ಬಲೆಯಲ್ಲಿ ಸಿಕ್ಕಿಕೊಂಡಾಗ ಮೀನುಗಾರರು ಸಹಜವಾಗಿಯೇ ಬಾಲವನ್ನು ಹಿಡಿದು ಸಮುದ್ರಕ್ಕೆ ಎಸೆದು ಬಿಡುವರು. ಒಮ್ಮೊಮ್ಮೆ ಸಮುದ್ರತೀರದ ಮೇಲೆಯೂ ಒಗೆಯುವರು. ದಂಡೆಗೆ ಬಿದ್ದೊಡನೆಯೇ ಅದರ ಆಟ ಮುಗಿದಂತೆಯೇ. ನೆಲದ ಮೇಲೆ ಇದಕ್ಕೆ ಚಲಿಸುವ ಸಾಮರ್ಥ್ಯವಿರುವದಿಲ್ಲ. ಚಲಿಸಲಾರದೆ ಒದ್ದಾಡಿ ಪ್ರಾಣಬಿಡುವದು.

ಮೇಲ್ಮೈವರ್ಣ ಬೂದು. ಮೇಲ್ಬದಿಯಲ್ಲೆಲ್ಲಾ ಕರಿಯ, ದುಂಡನೆಯ ಮಚ್ಚೆಗಳಿರುತ್ತವೆ. ಚಪ್ಪಟೆಯಾದ ಬಾಲವು ಅತಿಮುಖ್ಯ



ಚಿತ್ರ ೨೧. ಕಡಲಹಾವು

ವಾದ ಮತ್ತು ಈ ವಿಷಹಾರಿ ಹಾವನ್ನು ಸುಲಭವಾಗಿ ಗುರುತಿಸಲು ಅನುಕೂಲವಾದ ಲಕ್ಷಣ. ಈ ಬಾಲವು ನೀರಿನಲ್ಲಿ ಈಜಲು ಬಹು ಉಪಯುಕ್ತವಾಗಿರುತ್ತದೆ– ಮೀನಿನ ಬಾಲವು ಮೀನಿಗೆ ಸಹಾಯ ವಾಗುವಂತೆ. ತಳಭಾಗದ ಬಣ್ಣವು ಬಿಳಿ.

ವೀಕ್ಷಕರ ಪರೀಕ್ಷಣೆಯಂತೆ ಈ ಸರ್ಪಗಳು ಬಹು ಚುರುಕಾಗಿ ಇದ್ದು, ನೂರು ಮೀಟರವರೆಗೆ ಮುಳುಗಿ ಆಳವಾದ ಕಡಲಲ್ಲಿ ೫ ತಾಸುಗಳವರೆಗೆ ಇರಬಲ್ಲವು. ಉಪ್ಪಿನ ಪ್ರಮಾಣವು ಹೆಚ್ಚಾದಾಗ ಅದನ್ನು ಹೊರಹಾಕಲು ಒಂದು ತರಹದ ಗ್ರಂಥಿಗಳಿರುತ್ತವೆ. ಮೀನುಗಳು ಅತಿ ಮುಖ್ಯವಾದ ಆಹಾರವಾದುದರಿಂದ ಈ ಈ ಹಾವುಗಳ ಹಾವಳಿಯಿಂದ ಮೀನುಗಳ ಸಂಖ್ಯೆಯೂ ಕಡಿಮೆ ಆಗುತ್ತದೆ. ಈ ದೃಷ್ಟಿಯಿಂದ ವಿಚಾರಮಾಡಲಾಗಿ ಕಡಲ ಸರ್ಪ ಗಳು ಮಾನವನ ಶತ್ರುಗಳೆಂದು ನಿರ್ಧರಿಸಬಹುದು

ಮತ್ಯಾವ ಸರ್ಪಗಳು ಮಾನವನ ಶತ್ರುಗಳು ಮತ್ತು ಅದು ಹೇಗೆ ಎಂಬುದನ್ನು ಅರಿತುಕೊಳ್ಳುವಾ. ಸಿಹಿನೀರ ಹಾವುಗಳು ವಿಷ ರಹಿತ ಹಾವುಗಳಾದಾಗ್ಯೂ ಹೊಳೆ, ಹಳ್ಳ, ಕೆರೆ ಮತ್ತು ಭಾವಿ ಗಳಲ್ಲಿ ವಾಸವಾಗಿದ್ದು ಮೀನುಗಳನ್ನು ಮತ್ತು ಅವುಗಳ ಮರಿ ಗಳನ್ನು ಕಬಳಿಸುವದರಿಂದ ಮೀನುಗಳ ಸಂಖ್ಯೆಯನ್ನು ಕಡಿಮೆಮಾಡುತ್ತವೆ. ಹಾಗೆಯೇ ನೆಲದ ಮೇಲೆ ವಾಸಿಸುವ ಕೆಲ ಸರ್ಪಗಳು ಕೋಳಿಗೂಡಿನಲ್ಲಿ ನುಗ್ಗಿ ತತ್ತಿಗಳನ್ನು, ಮರಿಗಳನ್ನು ಒಮ್ಮೊಮ್ಮೆ ಕೋಳಿಗಳನ್ನು ನುಂಗಿ ಮಾನವನಿಗೆ ಹಾನಿಗಳನ್ನುಂ ಟುಮಾಡುತ್ತವೆ. ಕೀಟಗಳ ಮೇಲೆ ಜೀವಿಸುವ ಹಾವುಗಳು ಉಪ ಯುಕ್ತ ಮತ್ತು ನಿರುಪಯುಕ್ತ ಹುಳುಗಳನ್ನು ತಿಂದು ಲಾಭ, ಹಾನಿ ಎರಡಕ್ಕೂ ಕಾರಣವಾಗಿವೆ. ಏನೇ ಇದ್ದರೂ ಲಾಭ,ಹಾನಿಗಳ

ತುಲನೆಮಾಡಲಾಗಿ ಹಾವುಗಳು ಮಾನವನಿಗೆ ಹಾನಿಗಳಿಗಿಂತ ಲಾಭಗಳನ್ನೇ ಹೆಚ್ಚಾಗಿ ಮಾಡುವವು. ಅತ್ಯಲ್ಪ ಪ್ರಮಾಣದ ನಷ್ಟಗಳನ್ನು ಲಕ್ಷಿಸದೆ ಅಪಾರ ಲಾಭಗಳ ಬಗ್ಗೆ ಹೆಚ್ಚು ಮಹತ್ವ ಕೊಡಲೇಬೇಕು.

೫. ಪ್ರಥಮೋಪಚಾರ (Firt aid)

ಹಾವು ಕಚ್ಚಿದೊಡನೆಯೆ ಮಾಡಬೇಕಾದ ಉಪಚಾರಕ್ಕೆ ಪ್ರಥಮೋಪಚಾರ ಎಂದು ಕರೆಯುವರು. ಕಚ್ಚಿಸಿಕೊಂಡ ವ್ಯಕ್ತಿಗೆ ಪ್ರಥಮತಃ ಅಭಯಪ್ರಧಾನ ಮಾಡಬೇಕು. ಮಾನಸಿಕ ಭಯ ನಿವಾರಿಸುವದು ಅತಿಮುಖ್ಯವಾದ ಕಾರ್ಯ. ಹಾವು ಕಚ್ಚಿದೆ ಎಂಬ ಒಂದೇ ಒಂದು ಭಯದಿಂದ ಗಾಬರಿಯಾಗಿ ಸಾಯುವವರೇ ಹೆಚ್ಚು. ಏನೇ ಕಚ್ಚಲಿ, ಯಾವ ಹಾವೇ ಕಚ್ಚಲಿ, ವಿಷದ ಹಾವೇ ಕಚ್ಚಿತೆಂದು ಭ್ರಮಿಸಿ ಹೃದಯಾಘಾತದಿಂದ ಸತ್ತವರೂ ಇದ್ದಾರೆ. ಇದರ ವಿಷಯವಾಗಿ ನೀವೊಂದು ಮೋಜಿನ ಪ್ರಸಂಗವನ್ನು ತಿಳಿಯಿರಿ. ಇದು ದೇವರಾಸ ಪುಸ್ತಕದಲ್ಲಿ ವರದಿಯಾಗಿದೆ. ಒಂದು ಸಾರೆ ಬಚ್ಚಲು ಕೋಣೆಯಲ್ಲಿ ಯಾವದೋ ಪ್ರಾಣಿ ಕಚ್ಚಿದ ಅನುಭವವಾಯಿತಂತೆ. ಅದನ್ನು ಅವಳು ಹಾವೇ ಕಚ್ಚಿರಬಹುದೆಂದು ಭ್ರಮಿಸುತ್ತಾಳೆ. ನೋವು ಮತ್ತು ಉರಿತದ ಬಗ್ಗೆ ತಿಳಿಸಿದವಳೇ ಕಳೆಗುಂದಿದವಳಾಗಿ ಜ್ಞಾನವೇ ತಪ್ಪಿತಂತೆ. ಸುತ್ತಲೂ ಹಾವಿನ ಇರುವಿಕೆಯನ್ನು

ತಿಳಿದುಕೊಳ್ಳಲು ತೊಡಗಿದಾಗ ಅಲ್ಲಿ ಸಿಕ್ಕಿದ್ದು ಬೇರೇನೂ ಅಲ್ಲದೆ ಜೊಂಡಿಗ. ಆ ಜ್ಞಾನ ತಪ್ಪಿ ಬಿದ್ದುಕೊಂಡ ಮಹಿಳೆಯು ಬೆರಳ ತುದಿಗೆ ಕಚ್ಚಿದ ಪ್ರಾಣಿಯೇ ಅದಾಗಿತ್ತಂತೆ. ಅವಳು ಸ್ವಲ್ಪ ಚೇತರಿಸಿಕೊಂಡಾಗ ಅಲ್ಲಿಯ ನೆರೆದವರು ಜೊಂಡಿಗವನ್ನು ಅವಳಿಗೆ ತೋರಿಸಿ ಅದು ಕಚ್ಚಿದ ವಿಷಯವಾಗಿ ತಿಳಿಸಲು, ಕೂಡಲೇ ಚೇತರಿಸಿಕೊಂಡಳಂತೆ. ಕೆಲವು ವರದಿಗಳ ಪ್ರಕಾರ ೧೦ ಜನರಿಗೆ ಹಾವುಗಳು ಕಚ್ಚಿದ್ದರೆ ಕೇವಲ ಇಬ್ಬರಿಗೆ ಮಾತ್ರ ವಿಷಾರಿ ಸರ್ಪಗಳು ಕಚ್ಚಿರುತ್ತವೆ. ಇನ್ನಿತರರಿಗೆ ಅಂದರೆ ೮ ಮಂದಿಗೆ ವಿಷರಹಿತ ಹಾವುಗಳು ಕಚ್ಚಿರುತ್ತವೆ. ವಿಷದ ಹಾವುಗಳಿಂದ ಕಚ್ಚಿಸಿಕೊಂಡ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬರಿಗೆ ಮಾತ್ರ ವಿಷವೇರುವ ಸಾಧ್ಯತೆ ಇದೆಯಂತೆ.

ಹಾವು ಕಚ್ಚಿದೆಯೆಂಬ ಸಂಶಯ ಬಂದೊಡನೆಯೇ ಆ ವ್ಯಕ್ತಿಯಲ್ಲಿ ಆಸೆಯ ಬೆಳಕನ್ನು ಮೂಡಿಸಬೇಕು. ಮಿಂಚಿನ ವೇಗದಿಂದ ಪ್ರಥಮೋಪಚಾರ ನೀಡಬೇಕು. ಕ್ಷಿಪ್ರ ತಪಾಸಣೆ ಪ್ರಥಮೋಪಚಾರದ ಮೂಲಸೂತ್ರಗಳಲ್ಲಿ ಅತಿ ಪ್ರಾಮುಖ್ಯವಾದುದು. ವಿಷದ ಹಾವು ಕಚ್ಚಿದೆ ಎಂಬುದನ್ನು ಖಚಿತಪಡಿಸಿಕೊಂಡ ನಂತರ, ವಿಷ ರಕ್ತದಲ್ಲಿ ಸೇರಿದೆ ಎಂಬದನ್ನು ಖಾತ್ರಿಮಾಡಿಕೊಂಡ ಕೂಡಲೇ, ವಿಷದ ಪ್ರವಾಹವು ಮುಂದುವರಿಯುವದಕ್ಕಿಂತ ಮುನ್ನವೆ ಅದರ ಶಕ್ತಿಗುಂದಿಸಬೇಕಲ್ಲದೆ ಹೆಜ್ಜೆ, ಹೆಜ್ಜೆಗೆ ಅದಕ್ಕೆ ಅಡ್ಡಿ, ಆತಂಕಗಳನ್ನು ಒಡ್ಡಿ ವಿಷದ ಪ್ರವಾಹವು ನಿರರ್ಥಕವಾಗುವಂತೆ ಮಾಡಬೇಕು ಮತ್ತು ವಿಷವನ್ನು ನಾನಾರೀತಿಯಿಂದ ರಕ್ತದಕೂಡ ಹೊರಹಾಕಬೇಕು. ಹಾವು ಕಚ್ಚಿದಾಗ ಪಾಲಿಸಬೇಕಾದ ಮೂರು


ಹಂತಗಳಿವೆ. ಅವು ಯಾವವೆಂದರೆ, (೧) ಕಟ್ಟುಹಾಕುವದು (೨) ಕತ್ತರಿಸುವದು ಮತ್ತು (೩) ಮಲಿನ ಕರ್ತ್ವವನ್ನು ಹೀರಿ ಹೊರ ಹಾಕುವುದು.

೧. ಕಟ್ಟು ಹಾಕುವದು (Ligation)

ಹಾವು ಕಚ್ಚಿದೊಡನೆಯೇ ಕಟ್ಟುಹಾಕುವದೊಂದು ಸುರಕ್ಷಿತ ಉಪಾಯ. ಕೆಲವರ ಪ್ರಕಾರ ವಿಷಸರ್ಪ ಕಚ್ಚಿದ್ದರೆ ವಿಷ ರಕ್ತದೊಡನೆ ಸೇರಿದಾಗ ಕಟ್ಟುಹಾಕುವದನ್ನು ತಿಳಿಸುತ್ತಾರೆ. ಕಚ್ಚಿದ್ದು ವಿಷಾರಿ ಹಾವೋ ಅಥವಾ ವಿಷರಹಿತ ಹಾವೋ ಎಂದು ತಿಳಿದುಕೊಳ್ಳಲು. ಅನಂತರ ವಿಷದ ಹಾವೇ ಕಚ್ಚಿದ್ದರೆ ವಿಷ ರಕ್ತದಲ್ಲಿ ಬೆರೆತದ್ದನ್ನು ತಿಳಿಯಲು ಸಮಯ ಹಿಡಿಯುವದರಿಂದ ಇವೆಲ್ಲ ಸಂಗತಿಗಳನ್ನು ಅರಿತುಕೊಂಡು ಕಟ್ಟುಹಾಕುವ ಬದಲು, ಮುಂಚಿತವಾಗಿಯೇ ಕಟ್ಟುಹಾಕಿ, ಮುಂದಿನ ಕಾರ್ಯದಲ್ಲಿ ನಿರತರಾಗಬೇಕು. ಪಾದಕ್ಕೆ ಕಚ್ಚಿದ್ದರೆ ತೊಡೆಗೆ, ಹಸ್ತಕ್ಕೆ ಕಚ್ಚಿದ್ದರೆ ತೋಳಿಗೆ ಪಟ್ಟಿಹಾಕಬೇಕು. ಎರಡು ಜಾಗಗಳಲ್ಲಿ ಕಟ್ಟು ಹಾಕುವದು ಇನ್ನೂ ಸುರಕ್ಷಿತ. ಪಟ್ಟಿಗಾಗಿ ಬೇಕಾಗುವ ಸಾಮಗ್ರಿಗಳೆಂದರೆ ರಬ್ಬರಿನ ಅನುಕೂಲಕರವಾದ ತುಕಡಿ, ಗಟ್ಟಿಯಾಗಿ ಹೊಸೆದು ಹುರಿಮಾಡಿದ ಹಗ್ಗ, ಇಲ್ಲವೆ ಬಟ್ಟೆ. ಈ ಸಾಧನಗಳಲ್ಲಿ ಚರ್ಮದ ಒಂದು ತರಹದ ಪಟ್ಟಿಯನ್ನು ಬಳಸಿಕೊಳ್ಳಬಹುದು. ಇವೆಲ್ಲವುಗಳಲ್ಲಿ ರಬ್ಬರಿನ ಸಾಕಷ್ಟು ಉದ್ದವಾದ ಒಂದು ಪಟ್ಟಿಯಂತೂ ಅತ್ಯುತ್ತಮ. ಕಟ್ಟು ಹಾಕಿದೊಡನೆಯೇ ಹಾವಿನಿಂದ ಕಚ್ಚಿಸಿಕೊಂಡ ವ್ಯಕ್ತಿಯನ್ನು ಹಾಸಿಗೆಯ ಮೇಲೆ ಮಲಗಿಸಿ ಅಂಗಾಂಗಗಳನ್ನು ಅಲುಗಾಡಿದಸಂತೆ ಬಂಧಿಸಬೇಕು. ಇದಾದ ನಂತರ ಕಚ್ಚಿದ ಹಾವು ವಿಷದ ಹಾವೋ ಅಥವಾ ವಿಷ



ಚಿತ್ರ ೨೨. ವಿಷದ ಹಾವು ಕಚ್ಚಿದಾಗ
ಆಗುವ ಗಾಯಗಳು



ಚಿತ್ರ ೨೩. ವಿಷರಹಿತ ಹಾವುಗಳು ಕಚ್ಚಿದಾಗ
ಆಗುವ ಗುರುತುಗಳು

ರಹಿತ ಹಾವೋ ಎಂಬುದನ್ನು ತಿಳಿದುಕೊಳ್ಳುವದು ಅತ್ಯವಶ್ಯ. ಚರ್ಮದ ಮೇಲಾದ ಹಲ್ಲುಗಳ ಗಾಯುಗಳನ್ನು ಪರೀಕ್ಷಿಸಬೇಕು.

ವಿಷಾರಿ ಹಾವೇ ಕಚ್ಚಿದ್ದರೆ, ಹಾವು ಸಿಕ್ಕರಂತೂ ಅದರ ಲಕ್ಷಣ ಗಳನ್ನು ನೋಡಿ ನಿರ್ಧರಿಸಬಹುದು. ಹಾವು ಸಿಕ್ಕದೇ ಇದ್ದಾಗ ಹಲ್ಲುಗಳ ಗಾಯುಗಳನ್ನು ಪರೀಕ್ಷಿಸಬೇಕು, ಚರ್ಮದ ಮೇಲೆ ಮುಂದುಗಡೆ ಚಿತ್ರದಲ್ಲಿ ತೋರಿಸಿದಂತೆ ಎರಡು ದೊಡ್ಡ ಮತ್ತು ದುಂಡನೆಯ ಗಾಯುಗಳು ಕಾಣಿಸುವವು. ಇವು ವಿಷದಂತ ಗಾಯುಗಳು. ಇದು ವಿಷಪೂರಿತ ಹಾವು ಕಚ್ಚಿದ ನಿಖರ ವಾದ ಚಿನ್ಹೆ. ಈ ವಿಷದಂತ ಗಾಯುಗಳ ಹಿಂದೆಯೇ ಸಾಮಾನ್ಯ ಹಲ್ಲುಗಳ ಗಾಯುಗಳು ಇರುತ್ತವೆ. ಒಮ್ಮೊಮ್ಮೆ ಸಾಮಾನ್ಯ ಹಲ್ಲುಗಳ ಗಾಯುಗಳು ಕಾಣಿಸದೇ ಇರಬಹುದು. ಆದರೆ ವಿಷದಂತ ಗಾಯುಗಳು ಮಾತ್ರ ಕಾಣಿಸುವದು ಸರ್ವೇಸಾಮಾನ್ಯ. ವಿಷರಹಿತ ಹಾವು ಕಚ್ಚಿದಾಗ ಎಲ್ಲ ಗಾಯುಗಳು ಚಿತ್ರದಲ್ಲಿ ತೋರಿಸಿದಂತೆ ಒಂದೇ ತೆರನಾಗಿ ಇರುವವು.

ವಿಷಾರಿ ಹಾವು ಕಚ್ಚಿದೆ ಎಂಬುದನ್ನು ನಿರ್ಧರಿಸಿದೊಡ ನೆಯೇ ವಿಷ ರಕ್ತದಲ್ಲಿ ಸೇರಿದೆಯೋ, ಇಲ್ಲವೋ ಎಂಬುದನ್ನು ನಿರ್ಣಯಿಸಬೇಕು. ಅದು ಹೇಗೆ ಎಂಬುದನ್ನು ನೋಡುವಾ. ವಿಷದಂತ ಗಾಯುಗಳ (Fang wounds) ಸುತ್ತಲಿನ ತ್ವಚೆಯ ಬಣ್ಣ ಬದಲಾಗಿರುತ್ತದೆ. ಹಚ್ಚಗೆ, ನೀಲಿ ಇನ್ನೂ ಕೆಲವು ಸಂದರ್ಭ ಗಳಲ್ಲಿ ಜಾಂಬಳಿವರ್ಣದ್ದಾಗಿ ಊತಬರುತ್ತದೆ. ಹೀಗೆ ಬಾವು ಕಟ್ಟುಹಾಕಿದುದರಿಂದಲೂ ಬಂದಿರುವ ಸಾಧ್ಯತೆ ಇದೆ. ಕಟ್ಟು ಹಾಕುವಿಕೆಯಿಂದ ಬಾವು ಬಂದಿದ್ದರೆ, ಆ ಬಾವು ಮುಟ್ಟಲು

ತಣ್ಣಗೆ ಹತ್ತುವದು. ವಿಷದಿಂದ ಬಾವು ಬೆಚ್ಚಗೆ ಹತ್ತುವದು. ವಿಷದಿಂದ ರಕ್ತ ಮಲಿನವಾದ ಪಕ್ಷದಲ್ಲಿ ರಕ್ತ ಹೆಪ್ಪುಗಟ್ಟುವ (Clotting) ಸಾಮರ್ಥ್ಯ ತೊಲಗುವದು. ವಿಷದ ಹಾವು ಕಚ್ಚಿದೆ ಎಂದು ನಿರ್ಧರಿಸಿ, ವಿಷರಕ್ತದಲ್ಲಿ ಸೇರಿದೆ ಎಂಬುದನ್ನು ನಿರ್ಣಯಿಸಿ ದೊಡನೆಯೇ ಪ್ರಥಮೋಪಚಾರವನ್ನು ತೀವ್ರಗತಿಯಿಂದ ಮುಂದು ವರಿಸಬೇಕು. ಅರಿವೆಯ ಕಟ್ಟನ್ನು ಹಾಕಿದಾಗಂತೂ ಅರಿವೆ ಯನ್ನು ಮುರಿಹೊಡೆಯಬೇಕು. ಹೀಗೆ ಮಾಡವಾಗ ಒಂದು ಬೆರಳನ್ನು ಒಳಸೇರಿಸುವ ಅವಕಾಶವನ್ನು ಮಾಡಿಕೊಳ್ಳಬೇಕು. ಕಟ್ಟನ್ನು ೧೫–೨೦ ಮಿನಿಟುಗಳಿಗೆ ಒಂದು ಬಾರಿ ೨–೩ ನಿಮಿಷ ಗಳವರೆಗೆ ಸಡಿಲಿಸಬೇಕು. ಕಟ್ಟನ್ನು ಹಾಗೆಯೇ ಬಿಟ್ಟರೆ ರಕ್ತ ಪೂರೈಕೆ ನಿಂತುಹೋಗಿ ಅರ್ಧಾಂಗವಾಯು ಬರುವ ಸಾಧ್ಯತೆ ಇದೆ.

೨. ವಿಷದಂತಗಾಯ(Fangwound)ಗಳನ್ನು ಆಳವಾಗಿಯೂ ಮತ್ತು ಹೆಚ್ಚು ಅಗಲವಾಗಿಯೂ ಕತ್ತರಿಸುವದು (Incision)

ನಂಜುನಿರೋಧಕ. ದುರ್ಬಲ ದ್ರಾವಣದಿಂದ ಗಾಯ ಗಳನ್ನು ತೊಳೆದು, ಹರಿತವಾದ ಮತ್ತು ಜಂಗುಹತ್ತದೇ ಇರುವ ಚಾಕುವಿನಿಂದಾಗಲೀ ಇಲ್ಲವೇ ಬ್ಲೇಡಿನಿಂದಾಗಲಿ ಗಾಯಗಳನ್ನು ಕತ್ತರಿಸಬೇಕು. ಕತ್ತರಿಸುವ ಪೂರ್ವದಲ್ಲಿ, ಉಪಕರಣವನ್ನು ದೀಪದ ಜ್ಯೋತಿಯಿಂದ ತುಸು ಬಿಸಿಮಾಡಿಕೊಳ್ಳಬೇಕು. ಆಳವಾಗಿ ಮತ್ತು ಹೆಚ್ಚು ಅಗಲವಾಗಿ ಕತ್ತರಿಸಿಕೊಳ್ಳುವಾಗ ಸಾಧ್ಯವಾದ ಮಟ್ಟಿಗೆ ಹೆಚ್ಚು ರಕ್ತನಾಳಗಳಿಗೆ ಧಕ್ಕೆ ಆಗದಂತೆ ಎಚ್ಚರಿಕೆ ವಹಿಸಬೇಕು.

೩. ಮಲಿನ ರಕ್ತವನ್ನು ಹೀರಿ ಹೊರಹಾಕುವದು(Suction)

ಈ ಕಾರ್ಯಕ್ಕೆ ಮೊಲೆಹಾಲನ್ನು ಹೀರಲು ಉಪಯೋಗಿಸುವ ಹೀರುಪಂಪು ಉಪಯೋಗಿಸಬೇಕು. ಹೀರುಪಂಪು ಸಿಗದೇ ಇದ್ದಾಗ ಗತ್ಯಂತರವಿಲ್ಲದೆ ಕೋಳಿಗಳ ಗುದದ್ವಾರ ಇಲ್ಲವೆ ಬಾಯಿಗೆ ಎಣ್ಣೆಸವರಿಕೊಂಡು ಮಲಿನ ರಕ್ತವನ್ನು ಹೀರುವ ಕ್ರಿಯೆ ಮುಂದುವರಿಸಬಹುದು. ಹೀರಲು ಬಾಯಿ ಉಪಯೋಗಿಸುವಾಗ ಗಾಯಗಳೇನಾದರೂ ಬಾಯಿಯಲ್ಲಿ ಇದ್ದರೆ ಇದು ಅಷ್ಟು ಸುರಕ್ಷಿತವಲ್ಲ. ಮಲಿನ ರಕ್ತ ಹೀರಿಕೊಂಡು ಹೊರಚೆಲ್ಲುವಾಗ ಗಾಯಗಳನ್ನು ಪುನಃ ಕ್ರಿಮಿನಾಶಕ ದ್ರವದಿಂದ ತೊಳೆದು ಮಂಜುಗಡ್ಡೆಯನ್ನು ಇಡಬೇಕು. ಮಂಜುಗಡ್ಡೆ ಸಿಗದೆ ಇದ್ದಾಗ ಸ್ವಚ್ಛವಾದ ಬಟ್ಟೆಯನ್ನು ತಣ್ಣೀರಿನಲ್ಲಿ ಅದ್ದಿ ಗಾಯಗಳ ಮೇಲೆ ಇಡಬೇಕು. ವಿಷಯುಕ್ತ ರಕ್ತವನ್ನು ಸಾಕಷ್ಟು ಹೊರಹಾಕಲಾಗಿ ವಿಷದ ಪ್ರಕೋಪವು ಬಹುಮಟ್ಟಿಗೆ ಕಡಮೆಯಾಗಲು. ಗಾಯಗಳನ್ನು ಮತ್ತೊಮ್ಮೆ ಮೇಲೆ ತಿಳಿಸಿದಂತೆ ಯೋಗ್ಯವಾದ ದ್ರಾವಣದಿಂದ ತೊಳೆದು, ಮೃದುವಾದ ಬಟ್ಟೆಯ ಪಟ್ಟಿ ಬಂಧಿಸಿ, ರೋಗಿಯನ್ನು ಅತಿ ಹತ್ತಿರದ ದವಾಖಾನೆಗೆ ಸಾಗಿಸಬೇಕು. ಸೂಚನೆ: ಕತ್ತರಿಸಲು ಬೇಕಾದ ಉಪಕರಣ ಮತ್ತು ಹೀರುಪಂಪು ಇವುಗಳ ವ್ಯವಸ್ಥೆ ಆಗದೇ ಇದ್ದಾಗ, ಕಟ್ಟನ್ನಾದರೂ ಉಪಯೋಗಿಸಿ ಸಮೀಪದ ಆಸ್ಪತ್ರೆಗೆ ಸಾಗಿಸಬೇಕು. ಕಚ್ಚಿದ್ದು ವಿಷರಹಿತಹಾವು ಎಂದು ತಿಳಿದುಕೊಂಡರೆ ಪಟ್ಟಿಯನ್ನು ತೆಗೆದೊಗೆದು ಗಾಯಗಳಿಗೆ ಅಂದರೆ ಸಾಮಾದಂತಗಳಿಂದಾದ ಗಾಯಗಳಿಗೆ ಮಾತ್ರ ಚಿಕಿತ್ಸೆ ನೀಡಿ ಕಚ್ಚಿಸಿಕೊಂಡ ವ್ಯಕ್ತಿಯ ಬೆನ್ನುತಟ್ಟಿ ಧೈರ್ಯತುಂಬಿಸಿ ಕಳಿಸಿಕೊಡಬೇಕು.

೬. ದಂತಕಥೆಗಳು ಮತ್ತು ನಂಬಿಕೆಗಳು

(೧) ನಾಗರಹಾವು ಹೆಣ್ಣೆಂದು, ಕೇರೆಹಾವು ಗಂಡೆಂದು, ಅವು ಸಂತಾನ ಅಭಿವೃದ್ಧಿಗಾಗಿ ತಳಕಿ ಬೀಳುವವೆಂದೂ ತಪ್ಪು ಭಾವನೆ ಇದೆ. ಇವೆರಡು ವಿವಿಧ ಜಾತಿಯ ಸರ್ಪಗಳಿದ್ದು ಅವು ಒಂದಕ್ಕೊಂದು ತಳಕಿಬೀಳುವ ಪ್ರಶ್ನೆಯೇ ಇಲ್ಲ.

(೨) ನಾಗರ ಹಾವಿಗೆ ಸಂಗೀತದಲ್ಲಿ ಹೆಚ್ಚು ಅಭಿರುಚಿ ಇರುವದೆಂದು, ಹಾವಾಡಿಗನ ಪುಂಗಿಯ ನಾದವನ್ನು ಕೇಳಿ ಆ ಸಂಗೀತದ ಮಾಧುರ್ಯವನ್ನು ಸವಿಯಲು ಎಲ್ಲಿದ್ದರೂ ಹರಿದು ಬರುವದೆಂದು ಹೇಳುತ್ತಾರೆ. ಪುಂಗಿಯ ನಾದದ ಸವಿಯನ್ನು ಅನುಭವಿಸುತ್ತಾ ತನ್ನ ಹೆಡೆಯನ್ನು ಅಲುಗಾಡಿಸುವದೆಂದು ಹೇಳುವದು ನಿಜವಲ್ಲ. ಹಾವಾಡಿಗನು ತನ್ನ ಪುಂಗಿಯನ್ನು ಒಂದೆಡೆ ನಿಲ್ಲಿಸದೆ ಪಕ್ಕದಿಂದ ಪಕ್ಕಕ್ಕೆ ತೂಗಾಡಿಸುತ್ತಿರುವವರೆಗೂ ಹಾವು ಕೂಡ ತನ್ನ ಹೆಡೆಯನ್ನು ಬಿಚ್ಚಿ ಗಂಭೀರವಾಗಿ ಅಲ್ಲಾಡಿಸುತ್ತಾ ಇರುವದು. ಪುಂಗಿಯನ್ನು ನಿಲ್ಲಿಸಿದರೆ ಹೆಡೆಯನ್ನು ತಕ್ಷಣವೇ ನೆಲಕ್ಕೆ ಬಡಿಯುವದು.

(೩) ಕೇರೆಯ ಹಾವು, ಆಕಳು ಮೇಯಲು ಹೋದಾಗ ಅದರ ಕಾಲಿಗೆ ಬಾಲದಿಂದ ಸುತ್ತುಹಾಕಿ ಸ್ತನಪಾನ ಮಾಡುವದೆಂಬ ಒಂದು ಮೋಜಿನ ಮಾತೂ ಇದೆ. ಸರ್ಪಗಳು ಮಾಂಸಾಹಾರಿಗಳು. ಅವಕ್ಕೆ ಹಾಲಿನ ಅವಶ್ಯಕತೆ ಇಲ್ಲ. ಹಾಲನ್ನು ಕುಡಿ

ಯುವ ಅನುಕೂಲತೆಗಳೂ ಇಲ್ಲ. ಕೇರೆಹಾವು ಸ್ತನಾಗ್ರಗಳಿಗೆ ಬಾಯಿ ಹಾಕಿದಾಗ ಚೂಪಾದ ಹಲ್ಲುಗಳಿಂದ ಗಾಯಗಳಾಗಿ ಹಾಲು ಬರುವ ಬದಲು ರಕ್ತಸೋರುವದು ಖಂಡಿತ.

(೪) ನಾಗರಹಾವಿನಲ್ಲಿ ಮಾಣಿಕ್ಯವಿರುವದೆಂಬ, ಹಾವು ರಾತ್ರಿವೇಳೆಯಲ್ಲಿ ಆಹಾರವನ್ನು ಇದರ ಬೆಳಕಿನಿಂದ ಹುಡುಕು ದೆಂಬ, ಆಶ್ಚರ್ಯಕರವಾದ, ಹುರುಳಿಲ್ಲದ ನಂಬಿಕೆಯೂ ಇದೆ. ಹೀಗೇನಾದರು ಹಾವಿನಲ್ಲಿ ಮಾಣಿಕ್ಯಗಳು ದೊರಕಿದ್ದರೆ ನಾಗರ ಹಾವುಗಳನ್ನು ಕೊಂದು ಮಾಣಿಕ್ಯಗಳನ್ನು ಪಡೆಯುವ ಸ್ಪರ್ಧೆಯೇ ಏರ್ಪಡುತ್ತಿತ್ತು.

(೫) ಕೆಲವು ಹಾವುಗಳಿಗೆ, ನಾನು ಕೆಲವರ ಬಾಯಿಂದ ಕೇಳಿದ ಪ್ರಕಾರ ದೇವರ ಹಾವುಗಳಿಗೆ, ರೋಮಗಳಿರುವವು ಎಂಬ ಹಾಸ್ಯಾಸ್ಪದವಾದ, ಶುದ್ಧ ಕುರುಡು ನಂಬಿಕೆ ಇದೆ. ರೋಮಗಳಿರು ವದು ಸಸ್ತನಿಗಳ ಲಕ್ಷಣ. ಹಾವುಗಳು ಸಸ್ತನಿಗಳಲ್ಲ, ಇವು ಉರಗ ಪ್ರಾಣಿಗಳು. ಅಕಸ್ಮಾತ್ ಹಾವಾಡಿಗನಲ್ಲಿದ್ದ ಹಾವಿನ ತಲೆಯ ಮೇಲೆ ಕೂದಲಗಳೇನಾದರು ಕಂಡರೆ ಅದು ಹಾವಾಡಿಗನ ಕೈಚಳಕ, ಇವರು ಕುದುರೆಯ ಜೆವಿಗಳನ್ನು ಅಂದರೆ ಬಾಲದ ಕೂದಲುಗಳನ್ನು ತೆಗೆದುಕೊಂಡು ಹಾವಿನ ತಲೆಯ ಮೇಲೆ ಚುಚ್ಚುವರಂತೆ.

(೬) ಗರುಡನ ಗೆರೆಯ ವಿಷಯ : ಯಾವ ವ್ಯಕ್ತಿಗೆ ಗರುಡ ಮಚ್ಚೆ ಇರುವದೋ ಅವನಿಗೆ ಎಂತಹ ಸರ್ಪವಾದರೂ, ಅಂಜಿ, ರಾವುಹೊಡೆದು ನಿಂತುಬಿಡುವದಂತೆ. ಇದೊಂದು ಹುರಳಿಲ್ಲದ ಹುಚ್ಚು ನಂಬಿಕೆ. ಸರ್ಪಗಳು ನೈಸರ್ಗಿಕವಾಗಿ ಅಂಜುಗುಳಿ ಪ್ರಾಣಿ

ಗಳು. ಹಾವನ್ನು ಹಿಡಿಯಬೇಕಾದರೆ ಕೇವಲ ಧೈರ್ಯ ಮತ್ತು ಕೈಚಳಕವಷ್ಟೇ ಸಾಕು. ಗರುಡನ ಗೆರೆಯ ವಿಚಾರ ಕೇವಲ ಬೊಗಳೆ.

(೭) ಗರ್ಭಿಣಿ ಹೆಣ್ಣುಮಕ್ಕಳ ನೆರಳು ಹಾವಿನಮೇಲೆ ಬಿದ್ದರೆ ಹಾವು ಕುರುಡಾಗುವದಂತೆ. ಗರ್ಭಿಣಿ ಹೆಣ್ಣುಮಕ್ಕಳ ನೆರಳು ಬೀಳುವದಕ್ಕೂ ಹಾವು ಕುರುಡಾಗುವದಕ್ಕೂ ಯಾವ ಸಂಬಂಧವೂ ಇಲ್ಲ.

(೮) ಮಣ್ಣುಮುಕ್ಕಹಾವು ಇಲ್ಲವೆ ಎರೆಹಾವು (Blind Snake)ಯಾವಭಾಗವನ್ನು ನೆಕ್ಕುವದೋ ಅದು ಕೊಳೆಯುವದಂತೆ. ಹಾಗೇನು ಆಗುವದಿಲ್ಲ. ಇದು ಕೇವಲ ಕಾಲ್ಪನಿಕತೆ.

(೯) ಮಣ್ಣುಮುಕ್ಕಹಾವಿಗೆ, ಅದರಂತೆ ಕೆಲವು ಸರ್ಪಗಳಿಗೆ ಎರಡೂ ಕಡೆ ತಲೆಗಳಿರುವವೆಂದು ಹೇಳುವರು. ಇಂತಹ ಕೆಲ ಹಾವುಗಳ ಬಾಲಗಳು ಮೊಂಡವಿರುವದರಿಂದ ಬಾಲಗಳೂ ತಲೆ ಗಳಂತೆ ಗೋಚರಿಸುವವು. ಬಾಲಗಳನ್ನೇ ತಲೆಗಳೆಂದು ತಿಳಿದು ಕೊಳ್ಳಲಾಗುವದಷ್ಟೇ.

(೧೦) ಐದು, ಏಳು ಮತ್ತು ಹತ್ತು ಹೆಡೆಗಳ ಸರ್ಪದ ವಿಚಾರಗಳಂತೂ ದಂತಕಥೆಗಳೇ ಹೊರತು ಮತ್ತೇನೂ ಅಲ್ಲ.

೭. ಹಾವುಗಳಿಂದ ರಕ್ಷಣೆ

ಹಾವುಗಳು ವಾಸವಾಗಿರುವಂತಹ ಇಂಬುಗಳ ಬಗೆಗೆ ತಿಳಿದು ಕೊಂಡ ನಂತರ ಅವುಗಳಿಂದ ರಕ್ಷಣೆ ಪಡೆಯುವ ಅನೇಕ ವಿಧಾನ

ಗಳನ್ನು ತಿಳಿದುಕೊಳ್ಳುವದು ಅವಶ್ಯ. ಸರ್ಪಗಳು ನಮ್ಮಿಂದ ಸಾಕಷ್ಟು ದೂರ ಇದ್ದುಕೊಂಡೇ ನಮಗೆ ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಉಪಕಾರ ಮಾಡಬಯಸುವದು ಸಹಜ.

ನಾವು ವಾಸಿಸುವ ಮನೆಗಳ ಹೊರಗೂ ಒಳಗೂ, ಕಸ ಕಡ್ಡಿ ಬೀಳದಂತೆ ಚೊಕ್ಕಟವಾಗಿ ಇಡಬೇಕು, ಕಸದ ಗುಡ್ಡೆ. ಹುಲ್ಲು ದಟ್ಟವಾಗಿ ಬೆಳೆಯುವದು, ಗಿಡ ಕಂಟಿಗಳೇ ಹಾವುಗಳಿಗೆ ಆಶ್ರಯ ಕೊಡುವಂತಹ ಸ್ಥಳಗಳು.ಕಲ್ಲುಗುಡ್ಡೆಗಳು,ಇಟ್ಟಿಗೆ ರಾಶಿಗಳು, ಸೌದೆ ರಾಶಿಗಳು, ಇಲಿಹೆಗ್ಗಣಗಳ ಬಿಲಗಳು ನಮ್ಮ ಆವರಣದಲ್ಲಿ ಇದ್ದುವೆಂದರೆ ಹಾವುಗಳ ವಾಸಕ್ಕೆ ಬಹಳ ಅನುಕೂಲ. ಆವರಣವನ್ನು ಮೇಲಿಂದ ಮೇಲೆ ಸ್ವಚ್ಛ ಮಾಡಿಸುತ್ತಿರಬೇಕು. ಹಾವುಗಳು ಅಡಗಿಕೊಂಡಿರಲು ಅನುಕೂಲವಾದ ಯಾವದೇ ಸಾಧನಗಳು ನಮ್ಮ ಸುತ್ತಲು ಇರಬಾರದು. ಬಿಲಗಳನ್ನು ಮುಚ್ಚಿಸಿಕೊಳ್ಳಬೇಕು, ಕಂಪೌಂಡ ಗೋಡೆಗಳಲ್ಲಿ ಇಲ್ಲವೆ ಮನೆಯ ಗೋಡೆಗಳಲ್ಲಿ ಯಾವದೇ ತರಹದ ಬಿರುಕು ಇರದಂತೆ ನೋಡಿಕೊಳ್ಳಬೇಕು. ಕಿಡಕಿಗಳ ಮತ್ತು ಬಚ್ಚಲು ಮೋರಿಗಳ ಮುಖಾಂತರ ಸರ್ಪಗಳು ಮನೆಯೊಳಗೆ ನುಗ್ಗುತ್ತವೆ. ಈ ಮಾರ್ಗಗಳಿಗೆ ಸಣ್ಣ ಕಣ್ಣುಗಳುಳ್ಳ ತಂತಿ ಜಾಳಿಗೆಗಳನ್ನು ಹಾಕಿಸಬೇಕು. ನಮ್ಮ ಮನೆಯಲ್ಲಂತೂ ಪ್ರಾಣಿಗಳ ಆಹಾರ ಸರಪಳಿಯೇ ಇದೆ. ರಾತ್ರಿಯಾಗುತ್ತಲೇ ಜೊಂಡಿಗಗಳು ತಮ್ಮ ಚಟುವಟಿಕೆ ಆರಂಭಿಸುತ್ತವೆ. ಇವುಗಳನ್ನು ನುಂಗಲು ಹಲ್ಲಿಗಳು ಬರುತ್ತವೆ. ಹಲ್ಲಿಗಳನ್ನು ಕಬಳಿಸಲು ಹಾವುಗಳೂ ಪ್ರವೇಶಮಾಡುವದು ಸಹಜವೆ. ಒಂದು ಸಾರೆಯಂತೂ ನಮ್ಮ ಊಟದ ಮೇಜಿನ ಮೇಲೆ ಮಧ್ಯ ರಾತ್ರಿಯಲ್ಲಿ ದೊಪ್ಪನೆ

ಏನೊ ಬಿದ್ದಂತೆ ಸಪ್ಪಳವಾಯಿತು, ಅದೇ ಸಮಯಕ್ಕೆ ನನ್ನ ಮಗಳು ಕುಡಿಯಲು ನೀರನ್ನು ಕೇಳಿದ್ದರಿಂದ ನಾನು ಎದ್ದವನೇ ದೀಪಹಚ್ಚಲು,ಹಾವೊಂದು ಮೇಜಿನ ಒಂದು ಮೂಲೆಯಲ್ಲಿ ಬಿದ್ದು ಹೊರಳಾಡುತ್ತಿತ್ತು. ನಮ್ಮ ಮನೆಯಲ್ಲಿ ಎಲ್ಲರೂ ಬಹು ಒತ್ತಾಯ ಮಾಡಿದ್ದರಿಂದ ನಿರುಪಾಯನಾಗಿ ಅದನ್ನು ಕೊಂದು ಎಸೆಯ ಬೇಕಾಯಿತು. ನಮ್ಮ ಗ್ರಾಮವಾಸಿಗಳು ಹಾವಿನ ಕಡಿತಕ್ಕೆ ಬಲಿಯಾಗುವದು ಬಹಳ. ಯಾಕಂದರೆ ಅವರು ವಾಸಿಸುವ ಮನೆಗಳ ಸ್ಥಿತಿಯೇ ಹಾಗಿರುತ್ತದೆ. ಹಂಚಿನ ಮನೆಗಳು ಮತ್ತು ಗುಡಿಸಲುಗಳು ಹಾವುಗಳಿಗೆ ಆಶ್ರಯಕೊಡುವ ಮುಖ್ಯ ತಾಣಗಳು. ಗುಡಿಸಲು ವಾಸಿಗಳು ನೆಲದ ಮೇಲೆ ಮಲಗದೇ ಸ್ವಲ್ಪ ಎತ್ತರವಾದ ಸ್ಥಳದಲ್ಲಿ ಅಂದರೆ ಕಟ್ಟೆಯಮೇಲೆ ಮಲಗುವದು, ಪಲ್ಲಂಗ, ಹೊರಸು ಇಲ್ಲವೆ ಮಂಚಗಳ ಮೇಲೆ ಮಲಗುವದು ಹಾವುಗಳಿಂದ ರಕ್ಷಿಸಿಕೊಳ್ಳುವ ಒಂದು ಉತ್ತಮ ಉಪಾಯ. ಕಣದಲ್ಲಿ ಮಲಗುವವರೂ ಈ ಸಾಧನಗಳನ್ನು ಬಳಸಬೇಕು. ರಾತ್ರಿ ಸಮಯದಲ್ಲಿ ಕಣಕ್ಕೆ, ಹೊಲಕ್ಕೆ ಹಾಗೂ ಎಲ್ಲಿಗಾದರು ಹೊರಟಾಗ ಕೈಯಲ್ಲಿ ಬ್ಯಾಟರಿಯನ್ನಾಗಲೀ ಇಲ್ಲವೆ ಲಾಂದ್ರವನ್ನಾಗಲೀ ಹಿಡಿದಿರಬೇಕು. ಕಾಲಲ್ಲಿ ಚಪ್ಪಲಿ ಇಲ್ಲವೆ ಬೂಟುಗಳನ್ನು ಹಾಕಿಕೊಂಡಿರಬೇಕು, ನಮ್ಮ ಕುರಿಗಾರರು ಕಾಲಲ್ಲಿ ದಪ್ಪ ಅಟ್ಟೆಗಳ ಚರಕ್, ಬರಕ್ ಸಪ್ಪಳಮಾಡುವ ಚಪ್ಪಲಿಗಳನ್ನು ಹಾಕಿಕೊಂಡು ಹೊರಬೀಳುವದು ರಕ್ಷಣೆ ಪಡೆಯುವ ಅನುಕೂಲತೆಗಳು. ರಾತ್ರಿ ಸಮಯವಲ್ಲಿ ಕೈಯಲ್ಲಿ ಒಂದು ದಪ್ಪನೆಯ ಕೋಲನ್ನು ತೆಗೆದು ನೆಲಕ್ಕೆ ರಭಸದಿಂದ ಬಡಿಯುತ್ತಾ ಹೊರಟರಂತೂ ಸರ್ಪಗಳು

ನಮ್ಮ ಸಮೀಪವೇ ಸುಳಿಯುವದಿಲ್ಲ. ನಮ್ಮ ಹಿರಿಯರು ನಮಗೆ ಒಂದು ಉಪದೇಶದ ರೂಪದಲ್ಲಿ, "ತಮ್ಮಾ ಬಹಳ ಹುಷಾರಿ ಯಿಂದ ನಡಿಯಪಾ" ಎನ್ನುವದು ನಮ್ಮ ಅನುಕೂಲಕ್ಕಾಗಿಯೇ. ನಾಯಿ, ಬೆಕ್ಕು, ನೈಸರ್ಗಿಕ ವೈರಿಗಳಾದ ಮುಂಗಲಿ ಮತ್ತು ಕೆಲವು ಪಕ್ಷಿಗಳನ್ನೂ ಸಾಕಿಕೊಂಡಿರುವದು ರಕ್ಷಣೆ ಪಡೆಯುವ ಇನ್ನಿತರ ಉಪಾಯಗಳು. ಕಂಪೌಂಡಿನಲ್ಲಿ ಹೂವಿನ ಕುಂಡೆಗಳನ್ನು ಇಡು ವದು ಒಳಿತಲ್ಲ. ಯಾಕಂದರೆ ಈ ಕುಂಡೆಗಳಲ್ಲಿ ಹಾವುಗಳು ಆಶ್ರಯಹೊಂದುವ ಸಾಧ್ಯತೆ ಇದೆ. ನಾಗರಹಾವಿನ ವಿಷದಂತ ಗಳು ಉದ್ದವಿರುವದಿಲ್ಲ. ದಪ್ಪ ಬಟ್ಟೆ ಅಥವಾ ತೊಗಲಿನ ರಕ್ಷಣೆಯಿದ್ದರೆ ಅದರ ಕಡಿತದಿಂದ ತಪ್ಪಿಸಿಕೊಳ್ಳಲು ಅವಕಾಶ ಉಂಟು.

ಆದರೂ ಜೋಕೆ! ಹಾವುಗಳು ಜೋಡುಗಳಲ್ಲಿಯೂ, ಪೆಟ್ಟಿಗೆಗಳಲ್ಲಿಯೂ ಕೆಲವು ವೇಳೆ ಹಾಸಿಗೆಗಳಲ್ಲಿಯೂ ಅವಿತು ಕೊಂಡಿರುವ ಸಾಧ್ಯತೆ ಇದೆ.

ಗ್ರಂಥಋಣ

೧ ಕೆ. ಜಿ. ಘಾರಪುರೆ (K. G. Gharpurey) ೧೯೩೭ (1937) ಭಾರತದೇಶದ ಹಾವುಗಳು (The Snakes of India), The popular book depot. Limington Road Bombay-7, IV + ೧೬೭.

೨ ಪಿ. ಜೆ. ದೇವರಾಸ (P. J. Deoras) ೧೯೬೫ ಭಾರತ ದೇಶದ ಹಾವುಗಳು (Snakes of India) National Book Trust, New Delhi, IX + ೧೪೮

೩ ಡಾಕ್ಟರ ಎ. ಸುಬ್ಬರಾವ್ ಮತ್ತು ಎ. ನಾರಾಯಣರಾವ್ ೧೯೪೪ ಪ್ರಾಣಿಶಾಸ್ತ್ರ ಬಿ. ಬಿ. ಡಿ. ಪವರ್ ಪ್ರೆಸ್ ಅರಳೇಪೇಟೆ, ಬೆಂಗಳೂರ ಸಿಟಿ, vii + ೪೪೭.

೪ ಎಕಂಬರನಾಥ ಅಯ್ಯರ (Ekambaranath Ayyar), ೧೯೬೯ ಮಾನ್ಯುಅಲ್ ಆಫ್ ಜೂಆಲಜಿ–ಭಾಗ ೨ (Manual of Zoology Part II) S. Viswanathan 'Action Lodge' II McNichols Road Chetput, Madras-31, vi + ೬೭೦.

೫ ರೋಮ್ಯುಲಸ್ ವ್ಹಿಟಕರ್ (Romulus Whitaker) ೧೯೭೮ ಭಾರತದೇಶದ ಸಾಮಾನ್ಯ ಹಾವುಗಳು(Common

Snakes of India)A field guide.S. G. Wasani xix + ೧೫೨.

೬ ಎ. ಎಂ. ವಿಂಚೆಸ್ಟರ (A. M. Winchester) ೧೯೬೪ ಜೀವಶಾಸ್ತ್ರ ಮತ್ತು ಮಾನವನಿಗೆ ಅದರ ಸಂಬಂಧ. (Biology and its relation to mankind) D. Van Nostrand Company,New York-London xv + ೬೨೫.

೭ ಕಾರ್ಲ್ ಪಿ. ಸ್ಕಿಮಿಡ್ಟ್ (Karl P. Schmidt) ಮತ್ತು ರಾಬರ್ಟ್, ಇಂಗರ (Robetr Inger) ೧೯೫೭, ಜಗತ್ತಿನಲ್ಲಿಯ ಜೀವಂತ ಸರೀಸೃಪಗಳು (Living reptiles of the world) Published in Great Britain By Hamish Hamilton Ltd. 90 Great Russel street London W C. I. ೨೮೨.

೮ ಪಾರ್ಕರ್ ಮತ್ತು ಹಾಸ್ವೆಲ್ (Parker and Haswel) ೧೯೬೬ ಪ್ರಾಣಿಶಾಸ್ತ್ರ ಪಠ್ಯ ಪುಸ್ತಕ ಭಾಗ ೨(Text book of Zoology Vol-II)Mac Millan and company limited Little Essex Street London We 2 xiii + ೮೪೯.

೯ ಝಡ್. ಪಿ. ಮೆಟ್‌ಕಾಫ್ (Z.P. Metcalf) ೧೯೩೧ ಆರ್ಥಿಕ ಪ್ರಾಣಿಶಾಸ್ತ್ರದ ಒಂದು ಪಠ್ಯಪುಸ್ತಕ (A

Text book af Economic Zoology) London Henry Kimpton 203 Holborn wc x+೩೫೩.

೧೦ ಎ. ಎಂ.ಭಟ್ ೧೯೭೭ ವಿಷವೈದ್ಯಶಾಸ್ತ್ರ. ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ. ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ-೩ viii+೧೮೯.

೧೧ ಕಸ್ತೂರಿ, ಎಪ್ರಿಲ್ ೧೯೭೯..

೧೨ ಸ್ವ್ಯಾನ ಫೆಬ್ರುವರಿ, ೧೯೭೦

ಒಪ್ಪೋಲೆ

ಪುಟ	ಸಾಲು	ತಪ್ಪು	ಸರಿ
೯	೨೨	ಸಲಿಮಅಲಿ	ಡಾ. ಸಲೀಮಅಲಿ
೧೮	೩	ಯುನಾಸಿ	ಯುನಾನಿ
೧೮	೧೪	Hoffkint	Hoffkins
೨೪	೨	ಡಿಜಿಟಾಲ್	ಡಿಜಿಟಲ್
೪೦	೨	ರಸೆಲ್ಸ್	ರಸಲ್ಸ್
೪೦	ಚಿತ್ರ. ೧೧	ಬೆನ್ನಿನ ಮೇಲೆ ಇರುವ ಉಂಗುರದ ಸರದ ಹಾಗೆ ಇರುವ ಮೂರು ಕಪ್ಪು ಗುರುತುಗಳ ಸರಪಳಿ.	ಬೆನ್ನಿನ ಮೇಲೆ ಉಂಗುರದ ಸರದ ಹಾಗಿರುವ ಮೂರು ಕಪ್ಪುಗುರುತುಗಳ ಸರಪಳಿಗಳು
೫೦	೪	ಕೆಳಗಿನಗಳು	ಕೆಳಗಿನ
೫೮	೬	Firt	First

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

೧ ಪ್ಲಾಸ್ಟಿಕ್ ಸರ್ಜರಿ (ಸುರೂಪಕ ಶಸ್ತ್ರವಿಜ್ಞಾನ)

—ವಾಯ್. ಎನ್. ಇರಕ

೨ ಕಲಬುರಗಿ ಜಿಲ್ಲೆಯ ಶಿಲಾಶಾಸನಗಳು

—ವ್ಹಿ. ಶಿವಾನಂದ

೩ ತುಂಗಭದ್ರಾ ನೀರಾವರಿ ಬೆಳೆಗಳು

—ವಿಜಯಕುಮಾರ ಗಿಡ್ನವ

೪ ದ್ರಾವಿಡ ಜನಾಂಗ

—ಸಂಗಮೇಶ ಡಿ. ಸವದತ್ತಿಮಠ

೫ ವರಲಕ್ಷ್ಮಿ ಹೈಬ್ರಿಡ್ ಹತ್ತಿ

—ವಿಜಯಕುಮಾರ ಗಿಡ್ನವರ

೬ ಜೋಳದ ಕೀಟ ಪಿಡುಗುಗಳು ಹಾಗೂ ಅವುಗಳ ಹತೋಟಿ

—ಕೆ. ಎ. ಕುಲಕಣ

೭ ಬಾಲಲೀಲಾ ಮಹಾಂತ ಶಿವಯೋಗಿ

—ಎಸ್. ಎಸ್. ಭೂಸರಡ

೮ ಮೈಲಾರ ಬಸವಲಿಂಗ ಶರಣರು

—ದೇವೇಂದ್ರಕುಮಾರ ಹಕಾ

೯ ತರ್ದವಾಡಿ ನಾಡು

—ಆರ್. ಎನ್. ಗುರವ

೧೦ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು

—ಸಿ. ಹನುಮೇಗೌಡ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦